KARNATAKA

# Kabya Kalanidhi Series,

೬೭

NO. 6.

# ಚಿಕ್ಕದೇವೇಂದ್ರ ವಂಶಾವಳಿ

ಶ್ರೀ

ಎಸ್. ಜಿ. ನರಸಿಂಹಾಚಾರ್ರ್

ಲೈಬ್ರೇರಿಯನ್ ಗೌರ್ನಮೆಂಟ್ ಓರಿಯಂಟಲ್ ಲೈಬ್ರರಿ ಮೈಸೂರ್,

ಮತ್ತು

ಎಂ. ಎ. ರಾಮಾನುಜೈಯಂಗಾರ

ಅಸಿಸ್ಟೆಂಟ್ ಮಾಸ್ಟರ್ ವೆಸ್ಲಿಯನ್ ಮಿಷನ್ ಹೈಸ್ಕೂಲ್ ಮೈಸೂರ್,

ಇವರುಗಳಿಂದ ಶೋಧಿಸಲ್ಪಟ್ಟು

ಮೈಸೂರ್:

ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿತವಾಯ್ತು.

1901.

UNIVERSAL LIBRARY
OU_200624
UNIVERSAL LIBRARY

*Registered according to Act XXV of 1867*

[ALL RIGHTS RESERVED.]

# ಪೀಠಿಕೆ.

— ಚಿಕ್ಕದೇವೇಂದ್ರವಂಶಾವಳಿ —

ಈ ಗ್ರಂಥಕರ್ತನ ಹೆಸರು ಗೊತ್ತಿಲ್ಲ. ಈ ಗ್ರಂಥದಲ್ಲಿ ಚಿಕದೇವಮಹಾರಾಜನ ವಂಶವನ್ನು ವರ್ಣಿಸಿರುವುದರಿಂದಲೂ, "ಹೃದಯಾಂಭೋರುಹದಲ್ಲಿಯಾಂ ನೆನೆದು ಗೋಪಾಲಾಂಘ್ರಿಸಂಕೇಜವಂ । ಮುದವೆತ್ತಾತನನುಜ್ಞೆಯಾಂತುಸಿರ್ವೆನೀವಿದ್ವದ್ದಯಾಸಾರದಿಂ॥" (೧೦) ಎಂದು ಹೇಳಿರುವುದರಿಂದಲೂ, ಕವಿಯು ಶ್ರೀರಂಗಪಟ್ಟಣದಲ್ಲಿ ಚಿಕದೇವಮಹಾರಾಜನ ಕಾಲದಲ್ಲಿ (ಎಂದರೆ ಕ್ರಿ. ಶ. ೧೬೭೨-೧೭೦೪) ಇದ್ದಂತೆಯೂ, ಗೋಪಾಲಗುರುವಿನ ಆಜ್ಞಾನುಸಾರ ಈ ಗ್ರಂಥವನ್ನು ಬರೆದಂತೆಯೂ ತಿಳಿಯಬರುತ್ತದೆ. ಕವಿಯು ಗ್ರಂಥಾದಿಯಲ್ಲಿ ಶ್ರೀರಂಗಪಟ್ಟಣದ ರಂಗನಾಥಸ್ವಾಮಿಯನ್ನೂ, ರಂಗನಾಯಕಿಯನ್ನೂ ಸ್ತುತಿಸಿದ್ದಾನೆ. ಬಳಿಕ ಶಾರದೆಯನ್ನೂ, ಗಣಪತಿಯನ್ನೂ, ಗಂಗಾಧರೇಶ್ವರನನ್ನೂ ಕ್ರಮವಾಗಿ ಸ್ತುತಿಸಿದ್ದಾನೆ. ತರುವಾಯ ವಾಲ್ಮೀಕಿ, ವ್ಯಾಸ, ಕಾಳಿದಾಸ, ಬಾಣ-ಇವರನ್ನು ಸ್ತುತಿಸಿ ಗ್ರಂಥವನ್ನು ಉಪಕ್ರಮಿಸಿದ್ದಾನೆ.

ಈ ಗ್ರಂಥವು ಚಂಪುರೂಪದಲ್ಲಿದೆ. ಇದರಲ್ಲಿ ಆಶ್ವಾಸವಿಭಾಗಗಳಿಲ್ಲ; ೧೩೭. ಪದ್ಯಗಳಿವೆ. ಇದರಲ್ಲಿ ಮೈಸೂರು ದೇಶದ ಮಹಾರಾಜರ ವಂಶಾವಳಿಯು ಬಹುಸಂಗ್ರಹವಾಗಿ ವರ್ಣಿತವಾಗಿದೆ. ಇದು ಸಣ್ಣಗ್ರಂಥವಾಗಿದ್ದರೂ ವಿಶೇಷವರ್ಣನಾವೈಖರಿಗಳಿಂದ ನಿಬಿಡಿತವಾಗದೆ ಪ್ರಚಾರದಲ್ಲಿರುವ ಪದಗಳಿಂದಲೇ ಗುಂಭಿತವಾಗಿರುವುದರಿಂದಲೂ, ಮೈಸೂರು ಮಹಾರಾಜರ ಚರಿತ್ರೆಯನ್ನು ಸಂಗ್ರಹವಾಗಿ ವರ್ಣಿಸಿರುವುದರಿಂದಲೂ, ಈ ದೇಶೀಯರಿಗೆ ವಿಶೇಷವಾಗಿ ಆದರಣೀಯವಾಗುವುದರಲ್ಲಿ ಸಂದೇಹವಿಲ್ಲ.

# ಚಿಕ್ಕದೇವೇಂದ್ರವಂಶಾವಳಿ.

ಶ್ರೀಲಕ್ಷ್ಮೀಕುಚಕುಂಭಕುಂಕುಮಲಸತ್ಪಂಕಾಂಕಿತೋರಸ್ಸ್ಥಲಂ ।
ನೀಲಾಂಭೋರುಹಸುಂದರಾಂಗನಮರಾಧೀಶಾರ್ಚಿತಾಂಘ್ರಿದ್ವಯಂ ॥
ವ್ಯಾಲೇಶೋರುಫಣಾಮಣಿದ್ಯುತಿಸಮೂಹಾಶ್ಲಿಷ್ಟವಕ್ತ್ರಾಂಬುಜಂ ।
ಲೀಲಾಸಂತತಿವೆತ್ತು ರಕ್ಷಿಸುಗೆ ಶ್ರೀರಂಗೇಶನೊಲ್ದೆಮ್ಮುಮಂ ॥ ೧ ॥

ನುತಭಕ್ತಾಳಿಚಕೋರಕೌಮುದಿ ಮಹಾಮುಕ್ತ್ಯಂಗನಾಕುಂತಲ ।
ಪ್ರತತೀಂದಿಂದಿರಮಲ್ಲಿಕಾಕುಸುಮದಾಮಂ ಶ್ರೀಸ್ತನದ್ವಂದ್ವರಂ ॥
ಜಿತಮುಕ್ತಾಮಣಿಹಾರಮಾನತಮನಃಕಾದಂಬದುಗ್ಧಂ ರಮಾ ।
ಪತಿಪಾದಾಬ್ಜನಖಾಂಶು ಶೋಭನಕರಂ ತಾನಿರ್ಕೆ ಮಚ್ಚಿತ್ತದೊಳ್ ॥ ೨ ॥

ಮಾತೆ ಸಮುದ್ರಜಾತೆ ಸತತಾನತದೇವವಧೂಶಿರೋರುಹ ।
ವ್ರಾತ ಮಧುವ್ರತಾಂಘ್ರಿಜಲಜಾತೆ ಸುನೀತೆ ಜಗತ್ತ್ರಯಾತಿವಿ ॥
ಖ್ಯಾತೆ ವಿಲಾಸಯುಕ್ತೆ ವಿಧುಬಿಂಬಸಮಾನನೆ ರಂಗನಾಥಸಂ ।
ಪ್ರೀತೆ ವಿನೀತೆ ಮಾಡೆಮಗೆ ಶ್ರೇಯಮನಾಲಿಸಿ ರಂಗನಾಯಕೀ ॥ ೩ ॥

ವಾದಿತವಲ್ಲಕೀಗುಣನಿನಾದಭವನ್ನವಚಾರುಗೀತಸಾ ।
ರೋದಿತಮೋದೆ ಮೌನಿಹೃದಯಾಲಯದೀಪಿಕೆ ನೀರಜಾತಜಾ ॥
ಹ್ಲಾದಕರಾಂತರಂಗೆ ಕರುಣಂಬಡೆದಿತ್ತು ಮತಿಪ್ರಕಾಶಮಂ ।
ವೇದಶಿರೋನತಾಂಘ್ರಿಯುಗೆ ಪಾಲಿಸು ಶಾರದೆಯೆನ್ನನಾವಗಂ ॥ ೪ ॥

ಮದಜಲಮೀಂಟಯಿಸಾಂಟ ಮಿಗೆ ಸೋರ್ಕುತೆ ರಝುಂಕೃತಿಗೈವ ಬಾಲಷ ।
ಟ್ಪದಗಣಗಾನಮಂ ಬಿಡದೆ ಲಾಲಿಸಿ ಮೌಳಿಯನೊಲ್ದು ತೂಗುತು ॥
ನ್ಮದಿಸಿ ನಿಮೀಲಿತಾಕ್ಷಿಯಿನಭೀಕ್ಷಿಸಿ ಸರ್ವರಭೀಷ್ಟಮಿತ್ತು ಸ ।
ನ್ಮುದಮುರೆ ತಾಳ್ದು ಹಸ್ತಿಮುಖನೀಗೆಮಗೀವ ಮತಿಪ್ರಕಾಶಮಂ ॥

ವರಗಂಗೋಜ್ಜ್ವಲವುತ್ತರಂಗಕಣತಾರಾನೀಕದಿಂ ಫಾಲದೊಳ್ ।
ಮಿರುಗುತ್ತಿರ್ಪ ಸುಧಾಕರಾಂಶುತತಿಯಿಂ ವಕ್ತ್ರಾಬ್ಜಸುಸ್ಮೇರದಿಂ ॥
ಕರುಣಾಸಾರಕಟಾಕ್ಷದಿಂ ವಿಮಲದೇಹಜ್ಯೋತಿಯಿಂ ಶಾಂತಿಯಿಂ ।
ಕರೆದೆನ್ನಂ ಶುಭವಿತ್ತು ರಕ್ಷಿಸುಗೆ ಶ್ರೀಗಂಗಾಧರಂ ನಿಚ್ಚಲುಂ ॥೬॥

ನುತಿಪೆಂ ರಾಮಕಥಾಂಬುರಾಶಿಶಶಿಯಂ ವಾಲ್ಮೀಕಿಯಂ ರಾಧಿಕಾ ।
ಪತಿಚಾರಿತ್ರರಸೈಕಭಾವಶುಕನಂ ಶ್ರೀವ್ಯಾಸನಂ ಕಾಳಿಕಾ ॥
ಸ್ತುತಿಸಾರಪ್ಲುತಕಾಳಿದಾಸಕವಿಯಂ ಶೃಂಗಾರಲೀಲಾಕಲಾ ।
ತತಿಕಲ್ಪಾವನಿಜಾತಪಕ್ವಫಲವದ್ಗೀರ್ವಾಣನಂ ಬಾಣನಂ ॥ ॥೭॥

ಮಕ್ಷಿಕದಂತೆ ದುರ್ವ್ರಣಮನೇ ಬೆದಕುತ್ತಿಹ ದುರ್ಜನರ್ಕಳೊ ।
ಲ್ಪೀಕ್ಷಿಸಿ ಸುಪ್ರಬಂಧರುಚಿಯಂ ಕವಿಕೌಶಲಮಾರ್ಗಮಂ ಸದಾ ॥
ಲಕ್ಷಿಪರಂತವರ್ಗಳರಲಂತೆಳಿಯಂತೆ ಸುಗಂಧಸಾರಮಾ ।
ಪೇಕ್ಷಿಪುದಂತೆ ಸಜ್ಜನರ ಮಾನಸವೃತ್ತಿಯವರ್ಗೆ ವಂದಿಪೆಂ ॥೮॥

ನವರಸರೀತಿಯಂ ತಿಳಿವ ಲೋಕನಿಕಾಯಮಹಾಪ್ರಪಂಚಮಂ ।
ತವೆಯಱಿವಂಗಜಾತವರಶಾಸ್ತ್ರವಿಳಾಸಮನೈದೆ ಬಲ್ಲ ಸ ॥
ದ್ಯುವತಿಲಸತ್ಕಲಾತತಿಯನೊಪ್ಪಿರೆ ವೇದಿಪ ಸದ್ಗುಣಾಳಿ ಪ್ರೌ ।
ಣ್ಯ್ರವ ಕವಿಬೃಂದಕಾನೆಱಗಿ ಬೇಟ್ಪೆನವರ್ಗಳ ಚಿತ್ತವೃತ್ತಿಯಂ ॥೯॥

ಹೃದಯಾಂಭೋರುಹದಲ್ಲಿಯಾಂ ನೆನೆದು ಗೋಪಾಲಾಂಘ್ರಿಪಂಕೇಜಮು
ಮುದವೆತ್ತಾತನನುಜ್ಞೆಯಾಂತುಸಿರ್ವೆ*ನೀವಿದ್ವದ್ದಯಾಸಾರದಿಂ ॥
ಮದವದ್ವೈರಿನೃಪಾಲಖಂಡನರತಶ್ರೀಚಿಕ್ಕದೇವೇಂದ್ರಕೋ ।
ವಿದವಂಶಾವಳಿಯಂ ಬುಧಾಸ್ಪದಮನುದ್ಯಚ್ಛೋಭನಾಗಾರಮಂ ॥೧೦॥

ಅದೆಂತೆಂದೊಡೆ:—

ಚಳದುತ್ಕಲ್ಲೋಲಮಾಲಾಹತಿವಿದಳಿತಶುಕ್ತಿವ್ರಜೋನ್ಮುಕ್ತಮು
ಕ್ತಾ । ಫಳತಾರಾಸಂಚಯಂ ತತ್ತಟಾಕಲಿತಮಹಾವಿದ್ರುಮಚ್ಛಾಯೆ

ಸಂಧ್ಯಾ ॥ ವಿಳಸದ್ರಾಗಂ ತದಂತರ್ಗತವಡಬನಧಸ್ಥಾರ್ಕಬಿಂಬಂ ತದೀ
ಯೋಜ್ಜ್ವಳಶಂಖಂ ಚಂದ್ರನಂತೊಪ್ಪಿರೆ ಮೊಱೆದುದು ಸಂಧ್ಯಾನಭಂಬೋ
ಲ್ ಸಮುದ್ರಂ ॥ ॥೧೧॥

ಸುಳಿಯಿಂ ಫೇನವಿತಾನದಿಂ ಘುಳ್ಘುಳ್ಧ್ವಾನಂಗಳಿಂದೇಳ್ವ ಬೊ ।
ಬ್ಬುಳಿಯಿಂದುದ್ಗತಶುಕ್ತಿಯಿಂ ಮಕರಮೀನವ್ಯೂಹದಿಂ ರತ್ನಸಂ ॥
ಕುಳದಿಂ ವಿದ್ರುಮವಲ್ಲಿಯಿಂ ಜಲಗಜವ್ಯಾಳಂಗಳಿಂ ವಜ್ರಭೃ ।
ದ್ಬಳಭೀತಾಗತಶೈಲಸಂತತಿಯಿನಂಭೋರಾಶಿ ಕಣ್ಗೊಪ್ಪುಗುಂ ॥೧೨॥

ತೀರಧರಾಧ್ರನಿರ್ಝರತಟಾತಿವಿರಾಜಿತಕುಂದಮಲ್ಲಿಕಾ ।
ಚಾರುಸುಮಾಳಿತಲ್ಪಕೃತಮನ್ಮಥಕೇಳಿವಿಲಾಸವಿಭ್ರಮಂ ॥
ಚಾರಣಸುಂದರೀಕುಚತಟಾರ್ದ್ರಸುಕುಂಕುಮಘರ್ಮವಾರಿಯುಂ ।
ಕೊತ್ತೀರುಸುಗಂಧಮಪ್ಪ ವನಮಾರುತಗಂಧದಿನೊಪ್ಪಿತಬ್ಧಿಯುಂ ॥೧೩॥

ಕಮಲಾಕ್ಷಾಂಗನೆಯೆನ್ನ ಪುತ್ರಿ ವಿಧಿ ತಾಂ ದೌಹಿತ್ರನೀಶಂಗೆ ಚಂ ॥
ದ್ರಮನಂ ಮೌಳಿಯೊಳಾಂತು ರಂಜಿಸುವವ್ರೋಲಿತ್ತೆಂ ಸುರೇಶಂಗೆ ಪ್ರೋ ॥
ದ ಮಹೈಶ್ವರ್ಯಮನಿತ್ತೆನಾರೆನಗೆ ನೋಡಲ್ ಸಾಟಿಯೆಂದಿಂದು ಹ ।
ರ್ಷಮನಾಂತುರ್ಬಿದುದೆಂಬಿನಂ ತೆರೆಗಳಿಂದುರ್ಬಿರ್ದುದಾಸಾಗರಂ ॥೧೪॥

ಮಗಳಂ ನೋಳ್ಪೊಡೆ ಪೇಳ್ವೆನೇಂ ಚಪಳೆ ಪುತ್ರಂ ರಾಜಯಕ್ಷ್ಮಾಮಯ
ಪ್ರಗತಂ ಕುಂಭಜನೆನ್ನನಂದು ನೆರೆ ಪೀರ್ದಂ ಪ್ರೋದ್ವಿಷಕ್ಕಾಗರಂ ॥
ಮಿಗಿಲಾದೆಂ ಬಹುದುಃಖಮಂ ತಳೆದೆನಾರೆನ್ನಂತೆ ಕಷ್ಟಸ್ಥರೆಂ ।
ದಗಿದಂಭೋನಿಧಿ ತರ್ಗಿದಂತೆ ಗತಕಲ್ಲೋಲಂಗಳಿಂದೊಪ್ಪುಗುಂ ॥೧೫॥

ಸುತರಂಗಾಯುತಹಸ್ತದಿಂದೆಱಗುವಂಭೋಭೃತ್ಕುಚಂದಾಳ್ದು ಪ್ರೋ ॥
ದ್ಗತಮುಕ್ತಾರದನಾಳಿ ರಾಜಿಸೆ ನಗುತ್ತಂಭೋಜಮಂಬಾಪಗಾ ।
ಸತಿಯಾಸ್ಯಂಬಿಡಿದೂರ್ಮಿಕಾರವಗಳಧ್ವಾನಂಗಳಿಂ ಚುಂಬಿಸು ।
ತ್ತತಿಮೀನಾಂಬಕದಿಂದೆ ನೋಡಿ ಮಿಟನೇತಂಭೋಧಿ ವಿಭ್ರಾಜಿಕ್ಕುಂ ॥೧೬॥

ಸಲೆಯಿಂತೊಪ್ಪುವ ಸಿಂಧುವೆಂಬ ಕೊಳದೊಳ್ ತತ್ಕೀಲಕಕ್ಷ್ಮಾಧರಾ ।
ವಲಿ ಪತ್ರಂ ವಿಲಸತ್ಸ್ವಕೀಯ ಘನದಾತ್ತವ್ಯೂಹಕಿಂಜಲ್ಕಸ ॥
ಮ್ಮಿಲಿತಂ ಸಾನುಮಣಿವ್ರಜಾಂಶುಸುಪರಾಗಂ ನೀಲಮೇಘಾಳಿಸಂ ।
ಕಲಿತಂ ಹೇಮಸರೋಜಕರ್ಣಿಕೆಯೆನಲ್ ಸ್ವರ್ಣಾದ್ರಿಕಣ್ಗೊಪ್ಪುಗುಂ ॥

ಬಳಸಿ ಬರುತ್ತುಮಿರ್ಪ ಹಿಮಧಾಮನೆ ದೀಪಿಕೆ ಚಾರುತಾರಕಾ ।
ವಳಿಯೆ ಸುಗಂಧವಾಂತ ಕುಸುಮವ್ರಜವೊಪ್ಪುವ ಜಾಹ್ನವೀನದೀ ॥
ಜಳಮಭಿಷೇಕವಾರಿ ಘನರಾವಮೆ ಗಂಟೆಯದಾಗೆ ದೇವಸಂ ।
ಕುಳವಿರದರ್ಚಿಸಿರ್ಪ ಘನಲಿಂಗಮೆನಲ್ ಕನಕಾದ್ರಿ ರಂಜಿಕುಂ ॥೧೮॥

ಸಾಲ ರಸಾಲ ಜಂಬು ತಿಲಕಾಮಳಪಿಪ್ಪಲ ಕರ್ಣಿಕಾರ ಜಂ ।
ಬಾಲ ತಮಾಲ ಪೂಗ ರಸದಾಡಿಮ ಪಾಟಲ ಕೇತಕೀಲಸ ॥
ಜ್ಜಾಲ ಪಲಾಶ ಚಂಪಕ ಕುರಂಟಕ ಕಂಟಕಿ ನಾಳಿಕೇರ ಹಿಂ ।
ತಾಲ ಮಹೀಜಮುಖ್ಯತರುಸಂತತಿಯಿಂ ವನಮೊಪ್ಪಿತದ್ರಿಯೊಳ್ ॥೧೯॥

ಅಮರಾಧೀಶ್ವರಲೋಕದಂತೆ ಸುಮನೋವಾಸಂ ವಿಲಾಸಾಗ್ರಹಾ ।
ರಮಹಾಶ್ರೇಣಿವ್ರೊಲುಲ್ಲಸನ್ನಗಕುಶಾಖಾಸ್ಥದ್ವಿಜಧ್ವಾನಸಂ ॥
ಕ್ರಮಿತಂ ಬಂಧುರವೀಣೆಯಂತಿರೆ ಪ್ರವಾಳಾರಾನ್ವಿತಂ ತದ್ವನಂ ।
ಕಮನೀಯಾಂಬುಧಿಯಂತೆ ವಿದ್ರುಮಲತಾಸಂದೋಹವಿಭ್ರಾಜಿತಂ ॥೨೦॥

ತರಣಿಯ ಗೌರಿಯಂಗಜನ ಜಾತಿಯ ಕೆಂಡದ ಶೂಲಿಭಕ್ತರ ।
ಪ್ಪರಿಯರೊಳೊರ್ವಳುತ್ತರದ ಘೂಕದ ತೇರ ಕಠಾರಿಯರ್ಭಕೋ ॥
ದರಿಯ ಕಿರೀಟಿಯಿಂದಿರೆಯ ವಹ್ನಿಯ ನಾಮಮನಾಂತು ವರ್ಧಿಪಾ ।
ತರುತತಿಯಿಂದೆ ರಂಜಿಸಿತು ಮೇರುತಟಸ್ಥವಿಶಾಲಕಾನನಂ ॥೨೧॥

ಶರಭ ಲುಲಾಯ ಖಡ್ಗ ಶಶ ಜಂಬುಕ ಸೂಕರ ಗೂಢಪಾದ ಬಂ ।
ಧುರ ಕರಿ ಪುಂಡರೀಕ ರುರು ಕೇಸರಿ ಋಕ್ಷ ಬಿಡಾಲ ವಾನರೋ ॥
ತ್ಕರ ವೃಕ ಸತ್ಕುರಂಗ ಚಮರೀಮೃಗ ಗಂಡಕ ಮುಖ್ಯಮಾದ ಭೀ ।
ಕರಮೃಗಯೂಥನಿಸ್ವನದಿನೊಪ್ಪಿತು ತನ್ನಗಸಾನುಕಾನನಂ ॥೨೨॥

ಹರಿಪಾದಾಗ್ರವಿಭಿನ್ನಕುಂಜರಶಿರೋಮುಕ್ತಾರುಣೋದ್ಘೋರುಸಂ ।
ಕರಮುಕ್ತಾಕಣಯೂಥ ತತ್ಕಟಗಳದ್ದಾನಾಂಬುಧಾರಾಳಿಬಂ ॥
ಧುರಪಂಕಪ್ರಗತಪ್ರದಾನಮೃಗಪಾದಾನ್ವೇಷಣಾಸಕ್ತಭೀ ।
ಕರದಸ್ಯೂತ್ಕಟಕರ್ಣಘೋರರವದಿಂದೊಪ್ಪಿತ್ತರಣ್ಯಸ್ಥಳಂ ॥೧೩॥

ಮಿಗಿಲಾಮೇರುಗಿರೀಂದ್ರದಕ್ಷಿಣದಿಶಾಭೂಭಾಗದೊಳ್ ದೇಶರಾ ।
ಜಿಗಳೊಳ್ ರತ್ನಮಿದೆಂಬಿನಂ ಮೆಱೆದುದಾಕರ್ಣಾಟದೇಶಂ ಮಹಾ ॥
ನಗರಗ್ರಾಮಮಡಂಬಖೇಟಕಸಮೂಹೋದ್ಭೂತಸೌಖ್ಯಾಳಿಯಿಂ ।
ಸೊಗಸಾಂತಿರ್ಪ ಜನಂಗಳಂ ವಿಲಸಿತಷ್ಟೈಶ್ವರ್ಯದಿಂದಾವಗಂ ॥೧೪॥

ಎಳೆವೃಲ್ಲಂ ಮೇದು ಪಾನೀಯಮನುರೆ ಸವಿದುಂ ಮತ್ತೆ ಪೆರ್ಗೆಚ್ಚಲಿಂ
ಭೂ । ತಳದೊಳ್ ಸಾಲಾಗಿರಲ್ ಪಾಲ್ಸರಿಗಜಿವ ಪಶುವ್ರಾತದಿಂ ಕ್ಷೋಣಿ
ಮರ್ತ್ಯಾ ॥ ವಳಿಯುಂ ಮಾಳ್ಪಗ್ನಿಹೋತ್ರಂಗಳನೊಗೆವ ಹವಿರ್ಗಂಧ
ಧೂಮಾಳಿಯಿಂ ಮಂ । ಜುಳಲಕ್ಷ್ಮ್ಯಾವಾಸಮೆಂದೆಂಬಿನಮೆಸೆದುದು ಕ
ರ್ಣಾಟದೇಶಂ ಸತೋಷಂ ॥ ॥೧೫॥

ಧುನಿಯಿಂ ಕಲ್ಪನಗೋಪಮಾನತರುಸಂತಾನಂಗಳಿಂ ರಂಜಿಪಾ ।
ವನದಿಂ ಸೌರಭಪುಷ್ಪಸಮ್ಮಿಳಿತವಲ್ಲೀವ್ಯೂಹದಿಂ ಚೆಂದಳ ॥
ಸೊರ್ನೆಯಿಂದಿಂಪಿನ ನಾದಮಾಂತ ಕಳಕಂಠಶ್ರೇಣಿಯಿಂ ಹಂಸಚ ।
ಕ್ರನಿಕಾಯೋರುವಿಳಾಸಸಂಯುತತಟಾಕೋದ್ರಾಜಿಯಿಂದೊಪ್ಪುಗುಂ ॥

ಗಿಳಿಯಿಂ ಕೋಗಿಲೆಯಿಂ ತಬಾಕತತಿಯಿಂ ಪುಷ್ಪಾಳಿಯಿಂ ನಂದನಾ ।
ವಳಿಯಿಂ ಶೀತಳವಾರಿಯಿಂದನಿಲನಿಂ ಸತ್ರಂಗಳಿಂ ಮಾರ್ಗದಿಂ ॥
ಪೊೞಲಿಂ ಸತ್ಪ್ರಜೆಯಿಂ ಸುಗೋವ್ರಜದಿನುದ್ಯದ್ದ್ರವ್ಯಧಾನ್ಯಂಗಳಿಂ ।
ತೊಳಗುತ್ತಿರ್ದುದು ಸೀಮೆಯಿಂದೆಸೆದುದಾದೇಶಂ ಕರಂ ಚೆಲ್ವಿನಿಂ॥೧೭॥

ಅರಲಿಂ ಪಣ್ಣಿಂ ಲಸತ್ಪಲ್ಲವದಿನವನಿಜಂ ಮಕ್ಕಳಿಂ ಭಾಗ್ಯದಿಂ ಭಾ ।
ಸುರಸೌಂದರ್ಯಾಂಗನಾಸತ್ಕೃತನಿಜಪತಿಸದ್ಭಕ್ತಿಯಿಂದಂ ಜನಂ ಬಂ ॥

ಧುರವಿಪ್ರವ್ರಾತಪ್ರೋಜಾತತಿಮಿನುರುಕಲಾವ್ಯಕ್ತಿಯಿಂ ದಾನದಿಂ ಭೂ ।
ಸುರಸಂತಾನಂ ವಿಳಾಸಂಬಡೆದು ಮೆರೆಯುದಾರರಾಜ್ಯದೊಳ್ ಪೇಳ್ವೆನೇನಂ॥

ವಚನಂ॥ ಮತ್ತಮಾದೇಶಂ ಸಮುದ್ರದಂತೆ ಸದಾರವಿಭವ್ರೋಪೇತ ಮುಂ, ವನದಂತೆ ಭೂಜನಕುಲಾಶ್ರಯಮುಂ, ವೃಕ್ಷದಂತೆ ಸುಮನಃಪಲ್ಲ ವಪ್ರಮದಾಳಿಮಂಡಿತಮುಂ, ನಾಗಲೋಕದಂತೆ ಭೋಗಿಪವಿಳಾಸಮಿಳಿತ ಮುಂ, ನಾಕದಂತೆ ಸುರಾಗನಂದನಾಶ್ರಯಜನರಂಜಿತಮುಂ, ವ್ಯೋಮದಂ ತೆ ಘನಚಕ್ರರಾಜಹಂಸಮಂಡಲವಿರಾಜಿತಮುಮೆನಿಸಿರ್ದುದು. ಅಂತು ಮಲ್ಲಸೆಯುಂ ತದ್ದಕ್ಷಿಣದಿಗ್ಭಾಗದ ಪಶ್ಚಿಮರಂಗಕ್ಷೇತ್ರದ ಕಾವೇರೀ ನದಿಯೆಸೆದಿರ್ದುದದೆಂತೆಂದೊಡೆ:—

ಜಲಕೇಳ್ಯಾಸಕ್ತಮೋದಾಮರವರಲಲನಾಕುಂಭಿಕುಂಭೋರುವಕ್ಷೋ ।
ಜ್ಜ್ವಲಸತ್ಕಾಶ್ಮೀರಗಂಧಾಗರುಮೃಗಮದಸೌರಭ್ಯಸಂಭ್ರಾಂತಭೃಂಗಾ ॥
ವಲಿಝಂಕಾರಾತ್ತಗಾನೋತ್ಸವನಿಯುತತಟೋದ್ಯಾನಕಾಸಾರನವ್ಯೋ ।
ತ್ಪಲಸಂಕೇಜಾತಜಾತೀಕುಸುಮಪರಿಮಳೋದ್ಭೂತಮಂದಾನಿಲಾಂಕಂ॥

ನುತಕಾವೇರಿ ವಿರಾಜಿಸಿರ್ದುದು ಮರಾಳಕ್ರೀಡೆಯಿಂ ಚಕ್ರಸಂ ।
ತತಿಯಿಂದೂರ್ಮಿಕೆಯಿಂ ನಿಮಜ್ಜಿತಬುಧರ್ಗತ್ಯಂತಹೃತ್ಕಾಮ್ಯಸ ॥
ದ್ಗತಿಯಿತ್ತೊಪ್ಪುವ ಪೆರ್ಮೆಯಿಂದುಭಯತೀರಸ್ಥಾಗ್ರಹಾರಸ್ಥಿತಾ ।
ಮಿತವಿಪ್ರಸ್ತುತಿಘೋಷದಿಂ ಕಮಲಕಲ್ಹಾರಂಗಳಿಂ ಮೀನ್ಗಳಿಂ ॥೩೦॥

ವ॥ ಆನದಿಯಿರ್ತೆಱಂಬಿಡಿಮ ಪರಿವ ಪರಿಕಾಲ್ಗಳಿಂ ರಂಜಿಸಿ ಬೆಳೆದ ನೆಲ್ಲ ಗದ್ದೆಗಳಿರ್ದುವದೆಂತೆನೆ:—

ತೂಗುತ್ತುರ್ವುತೆ ತೊನೆಯುತೆ ।
ಬಾಗುತೆ ಬಳ್ಕುತೆ ಗಂಧವಾಂತುರೆ ಸೊಗಸಿಂ ॥
ರಾಗಿಸಿ ಪದುಳವ ಮನುಜ ।
ರ್ಗಾಗಿಸಿ ತೆನೆವಡೆದ ಶಾಲಿವನಮೆಸೆದಿರ್ಕುಂ ॥ ॥೩೧॥

ವರಕೀರಾವಳಿಚಂಚುಖಂಡನಗಳಚ್ಚೂತಕ್ಷಮಾರುಟ್ಫಲೋ ।
ತ್ಕರಜಂಬೂರಸದಾಡಿಮೇಕ್ಷುರಸಧಾರಾಸಾರದಿಂದುರ್ವಿ ಭಾ ॥

ಸುರವಾಗಿರ್ದ ಸುಗಂಧಶಾಲಿವನದೊಳ್ ಕೀರಾಳಿಯಂ ಕಾವ ಪೆ ॥
ಮುರಿಯರ್ ಪಾಂಥಜನರ್ಗೆ ಹರ್ಷದೊದವಂ ತರ್ಕುಂ ವಿಲಾಸಾನ್ವಿತಂ ।

ವ॥ ಅವರೊಳೊರ್ವ ಪಾಮರಿ ಗಿಳಿಯಂ ಸೋವಲೆಂದು

ಸರಸಿಜಗುಣದಿಂದೇಱಿಸಿ ।
ವರಕೈರವನಾಳಧನುವನಂಬುಜಮುಖಿ ತಾ ॥
ನಿರದಾಱಿಡಿಮೀಂಟೆಯನೊ ।
ತ್ತರಿಸಿಟ್ಟೋಡಿಸಿದಳಾದರ್ ಶುಕಸಂತತಿಯಂ ॥ ॥೩೩॥

ಮತ್ತಮೊಂದೆಡೆಯೊಳ್

ಪಾಲ್ದೆನೆಯ ಸಾರ ರುಚಿಯನ ।
ದೊಲ್ದೀಂಟಿಯೆ ಸೊಕ್ಕಿ ನಲಿದು ಸವಿನುಡಿಯಿಂದಂ ॥
ಕಾಲ್ದೆಗಸಲಾರ್ವ ವಧುಗಳ ।
ಬಲ್ದನಿಗಂಜದೆ ಶುಕಾಳಿ ಗರ್ದಯೊಳಿಸೆಗುಂ ॥ ॥೩೪॥

ಮತ್ತಮೊರ್ವ ಪಾಮರಿ

ಜಾಱೆ ಕುಚಾಂಬರಂ ಕುಣಿಯೆ ಕರ್ಣದೊಳೋಲೆ ಲಲಾಟದೊಳ್ ಕುರುಳ್
ಮೀಱಿಯೆ ನರ್ತಿಸಲ್ ನಡುಗೆ ನುಣ್ಮೊಲೆ ಬಳ್ಕೆ ಸುಮಧ್ಯಮುಂ ಕರಂ ॥
ಚಾರುನಿತಂಬಮುಂ ಪ್ರೊಡರೆ ನೂಪುರಕಂಕಣರಾವಮುಣ್ಮೆಯೊ ।
ಯ್ಯಾರದೊಳಟ್ಟು ಕೈರವದಿನೋಡಿಸಿದಳ್ ಮದಕೀರವೃಂದಮಂ ॥೩೫॥

ವ॥ ಅಲ್ಲಿಂ ದಕ್ಷಿಣದಿಶೆಯ ಮಹಿಷಾಪುರದ ರಮಣೀಯ ಮಾರ್ಗಸ್ಥ
ಲದೊಳ್

ಎಳಗೌಂಗೊಳ್ಗಂಬದಿಂದಂ ಕದಳಿಯ ತೊಲೆಯಿಂದಿಕ್ಷುದಂಡಂಗಳಿಂ ಕಂ ।
ಗೊಳಿಸಿಪರ್ಣಜಾತೆಯಿಂ ಚೆಂದಳಿರ ಪೊದಕೆಯಿಂ ಮಲ್ಲಿಕಾಸೂನದಾಮಂ ॥
ಗಳನಾಫುಲ್ಲಾಬ್ಜಘಂಟಾವಳಿಯಿನಳಿರವೋಲ್ಲಾಸದಿಂ ರಮ್ಯಕಾಂತಾ ।
ವಿಳಸನ್ನೇತ್ರಾಂಶುವಿಂದೊಪ್ಪಿದುವು ಮಿಗೆ ಪ್ರಪಾಶಾಲೆಗಳ್ ಸೌಖ್ಯದಿಂದಂ ॥

ಆಪ್ರಪಾಶಾಲೆಯೊಳೊರ್ವ ಕಾಂತೆ

ಪೊಳೆವಕ್ಷಿದ್ಯುತಿ ಪೊಣ್ಮೆ ಕಂಕಣರವಂ ಕೈಗಣ್ಮೆ ದೇಹಾಂಶು ತಾಂ ।
ಪೊಳೆಯಲ್ ಸುಸ್ಮಿತಕಾಂತಿಯುಣ್ಮೆ ವದನಾಬ್ಜಂ ಮುದ್ದುವೀಱಲ್ ಬಹೂ
ಜ್ಜ್ವಳಭೂಷಾರುಚಿ ರಾಜಿಸಲ್ ಸ್ಫಟಿಕಪಾತ್ರಂದಾಳ್ದು ಹಸ್ತಾಬ್ಜದೊಳ್
ತಿಳನೀರಂ ಪಥಿಕರ್ಗೆ ನೀಡಿ ರಸಸಲ್ಲಾಪಂಗಳಿಂದೊಪ್ಪಿದಳ್ ॥ ೩೭॥

ಮತ್ತಮೊಂದು ಪಾನೀಯಶಾಲೆಯೊಳೊರ್ವಳ್

ಸ್ಫುರಿತಾಪಾದನಖಸ್ಮಿತಾಂಶುತತಿಯಿಂ ಸ್ವಚ್ಛತ್ವಮಂ ಮಾಡಿ ಭಾ ।
ಸುರನಾಸಾಶ್ವಸಿತಂಗಳಿಂ ಬಿಡದೆ ಶೈತ್ಯಂಗೈದು ಸೌರಭ್ಯಮಂ ॥
ವರದೇಹೋತ್ಥಸುಗಂಧದಿಂ ರಚಿಸಿ ಹಸ್ತಾಂಭೋಜದೊಳ್ ಸತ್ಸುಧಾ ।
ಕರಕಾಂತೋಜ್ಜ್ವಲಪಾತ್ರೆಯಂ ತಳೆದು ಪನ್ನೀರಿತ್ತಳಾನಂದದಿಂ ॥ ೩೮

ಮತ್ತೊಂದು ಪ್ರಪಾಶಾಲೆಯೊಳ್

ಕರಪುಟವಾರಿಬಿಂಬಿತವಧೂರುಚಿರಾಧರಮೀಕ್ಷಿಸುತ್ತೆ ತಾ ।
ಳ್ದುರುತರಹರ್ಷದಿಂ ಸವಿದು ಚಪ್ಪರಿದಂಗನೆಯೋಷ್ಠಸಾರಮಂ ॥
ದುರೆ ಮುಬಿಸುತ್ತೆ ತಾಂ ತಣಿವನೈದದೆ ತೇಲಿಸಿ ಕಣ್ಗಳಂ ಪಥಾಂ ।
ತರದ ಬಟಿಲ್ಕೆಯುಂ ಕಳೆಯುತಿರ್ದನಪೇಕ್ಷೆಯೊಳೊರ್ವ ಮಾರ್ಗಿಕಂ ॥

ಇಂತೊಪ್ಪುವೆತ್ತ ಪ್ರಪಾಶಾಲೆಯ ಮುಂಗಡೆಯ ಪುರಮಾರ್ಗದೊಳ್

ಚಾರುಸುವರ್ಣವಾರಿಪರಿಪೂರಿತಕುಂಭಮನೈದೆ ಪೊತ್ತು ಸಂ ।
ಚಾರಿಪ ಕಾಮಿನೀಕುಚಗಳನ್ಮೃಗನಾಭಿಸುಗಂಧಸಾರಕಾ ॥
ಶ್ಮೀರರಜಂಗಳಂ ಬಿಡದೆ ಮಾರ್ಗದೊಳಾನೆಗಳೊಲ್ದು ಚೆಲ್ಲಿ ಕೊಂ ।
ಡಾರಯೆ ಗಂಧಹಸ್ತಿತತಿಯಾದುವು ಪೇಳ್ವೆನದೇನನದ್ಭುತಂ ॥ ೪೦॥

ಅಂತುಮಲ್ಲದೆಯುಂ ಸುರುಚಿರಮಾದ ಭೂಸತಿಯ ಮುಖಾಬ್ಜದಂ
ತೆ ಮೆಱೆವ ಮಹಿಷಾಪುರಮಂ ವರ್ಣಿಪೆನದೆಂತೆನೆ:—

ಭೂಮಿಯ ಸಂಪದಂಗಳನಭೀಕ್ಷಿಪೆವೆಂದೊಡನೈದೆ ಬಂದು ಸು ।
ಪ್ರೇಮದೆ ನೋೞ್ಪ ನಾಗಸುದತೀಜನಪಕ್ತಿಯ ಕಾಂತಿಯೊಳ್ ಪುಷ ॥

ಸ್ತೋಮದ ನುಣ್ಬೊಗರ್ ಮೆಱೆವುದೊಪ್ಪುವ ತತ್ಪರಿಖಾಂಬುಮಧ್ಯದೊಳ್
ಶ್ರೀಮದಿಳಾತಳಕ್ಕಧಿಕಮಾದುದು ತನ್ಮಹಿಷಾಪುರೇಡ್ಯಮುಂ ॥ ೪೧ ॥

ಸಸಿನೀಪತ್ತನಮಧ್ಯದಲ್ಲಿ ಹರಿ ಲಕ್ಷ್ಮೀಯುಕ್ತನಾಗಿರ್ಪನೆಂ ।
ದೊಸೆದಾವಾಸುಕಿ ನಾಗಲೋಕದಿನಿಳಾಭಾಗಕ್ಕೆ ಸಾರ್ತಂದು ತ ॥
ನ್ನ ಸಹಸ್ರೋರುಫಣಂಗಳಿಂ ಬಿಡದೆ ತಾಂ ವೇಷ್ಟೈಸಿ ನೋಳ್ಪಂತೆ ಕ ।
ಣ್ಗೆಸೆದತ್ತಾಪುರದಲ್ಲಿ ರನ್ನದೆನೆಗಳ್ ಸುತ್ತಲ್ ವಲಂ ಚೆಲ್ವಿನಿಂ ॥ ೪೨ ॥

ಚಾರುಸುವರ್ಣಕಾಂತಿ ಮಿಱುಗುತ್ತಿಹ ಕೋಟೆಯಿನಿಂದುಕಾಂತದಾ ।
ಳ್ವೇರಿಯಿನೊಪ್ಪುವೆತ್ತ ಮುಗಿಲಟ್ಟಳೆಯಿಂ ಕನಕಧ್ವಜಂಗಳಿಂ ॥
ವೀರಭಟಾಳಿಯಿಂದಿಭಸಮೂಹತುರಂಗನಿಕಾಯದಿಂ ಲಸ ।
ದ್ದ್ವಾರದ ಹೇಮಸೌಧರುಚಿಯಿಂ ಮಿಗೆ ರಂಜಿಸಿದತ್ತು ತತ್ಪುರಂ ॥ ೪೩ ॥

ಪುರವಧೂ ತನ್ನೊಳಿರ್ಪ ನರರೆಲ್ಲರತೀವವಿಭೂತಿಯುಕ್ತರೀ ।
ಧರೆಯೊಳಗಾರಿವರ್ಗೆ ಸರಿಯೆಂದೆನುತೊಲ್ದುರೆ ನಕ್ಕು ಹಿಗ್ಗುವಂ ॥
ತಿರೆ ಕಮನೀಯ ಸೌಧತತಿಕಾಂತಿ ವಿರಾಜಿಕುಮಲ್ಲದಂತುಮಾ ।
ನರಪತಿಕೀರ್ತಿಯಾವರಿಸಿ ಪರ್ವಿದ ಮಾಳ್ಕೆಯೆಸಲ್ ವಿರಾಜಿಕುಂ ॥ ೪೪ ॥

ಮಿಱುಗುವ ಸೌಧರೋಚಿ ನವಚಂದ್ರಿಕೆಯಂತೆ ತದಗ್ರಪದ್ಮರಾ ।
ಗರುಚಿರಕಾಂತಿ ಸಂಜೆಯೆನೆ ತತ್ಕಲಶಾವಳಿಕಾಂಚನಪ್ರಭೋ ॥
ತ್ಕರಮದು ಪೊಂಬೊಗರ್ಪರಿವ್ರೊಲಾಗೆ ತ್ರಿಕಾಲಮುಮಾಪುರಾಂತದೊಳ್ ।
ಸ್ಫುರಿಸೆ ವಿಕಾಸಮಾಂತೆಸಗುಮುತ್ಪಲಸಂಕರುಹಂಗಳಾವಗಂ ॥ ೪೫ ॥

ನೃಪಸೇವಾರ್ಥದೆ ಬಂದ ಭೂಪತಿಪದಾಲಂಕಾರರತ್ನಾಂಶುವಿಂ ।
ದ್ವಿಪದಾನಾಂಬುನಿತಾಂತಸಂಭ್ರಮಿತಭೃಂಗವ್ಯೂಹರಝಂಕಾರದಿಂ ॥
ವಿಪುಲಾಗಾರವಿಹಾರವಾರವನಿತಾದೇಹೋತ್ಥಗಂಧಾಳಿಚೋ ।
ರಪವಿತ್ರಾನಿಲನಿಂದೆ ರಂಜಿಸುಗುಮಾಗ್ರಾಮಾಂತಸದ್ವೀಥಿಗಳ್ ॥ ॥ ೪೬ ॥

ಅಲ್ಲಿಯುಂ,

ಮುನಿದಿಹ ಕಾಂತೆಯಾಲಯಕೆ ಮೆಲ್ಲನೆ ಪೋಗಿ ವಿಲಾಸವಾಂತು ಗ ।
ಲ್ಲನೆ ನಲಿದೀಯಲೀಲಲಿತವೀಟಕೆಯಂ ಸವಿನೋಡಿದಾಕ್ಷಣಂ ॥
ಮನದೊಲವಿಂದೆ ಕೋಪಮನೆ ಬಿಟ್ಟು ವಿನೋದದಿನಪ್ಪಿ ಚುಂಬಿಪಳ್ ।
ವಿನಯದೆ ನೋಡಿಮೆಂದು ಸಿತಪರ್ಣಮನಾಂತೆಸೆದರ್ ವರಾಂಗಿಯರ್ ॥

ಆಮುಂಗಡೆಯೊಳ್

ಚಂದನಕುಂಕುಮಾಗುರುಮೃಗೋದ್ಭವಸದ್ಘನಸಾರಸಾರಮಂ ।
ಸಂದಿಸಿ ಚಂದ್ರಕಾಂತಶಿಲೆಯೊಳ್ ಮಿಗೆ ತೇದುರೆ ಗಟ್ಟಿಸುತ್ತಿಹರ್ ॥
ಮಂದಸುಹಾಸದಿಂ ವಿಟಜನರ್ಗೆರದಿತ್ತು ತದೀಯನೇತ್ರಕಾ ।
ನಂದದ ರೂಪುದೋರಿಸುತೆ ರಂಜಿಸಿದರ್ ವರಗಂಧವಾಟಯೊಳ್ ॥ ೪೯ ॥

ನಿಜದೇಹೋದ್ಭವಗಂಧದಿಂ ಪೊರೆದು ವಕ್ತ್ರಾಂಭೋಜಸುಸ್ಮೇರದಿಂ
ಸೃಜಿಸುತ್ತುಂ ಮಿಗೆ ಸೊಂಪಿನಬ್ಜಗುಣದಿಂ ಮಾಲಾಳಿಯಂ ಗೈದು ಪಂ ॥
ಕಜಪತ್ರಾಂಬಕಿಯರ್ ಭುಜಂಗನಿವಹಕ್ಕೊಲ್ದಿತ್ತು ಸಂತೋಷದಿಂ ।
ಸುಜನಾವಾಸವಿಲಾಸಯುಕ್ತಮಹಿಷಗ್ರಾಮಾಧ್ಯದೊಳ್ ರಾಜಿಕುಂ ॥

ಪೊಂಗಳ ರಾಸಿಯಿಂ ಪರಿದುಕೂಲನಿಕಾಯದ ರತ್ನಯೂಥದಿಂ ।
ಮಂಗಳವಾದ ವಿದ್ರುಮಸಮೂಹದೆ ಕಾಂಚನಪಾತ್ರವೃಂದದಿಂ ॥
ಸಿಂಗರವಾದ ಚಾರುಮಣಿತೋರಣದಿಂ ಗಣಿಕಾಲಯಂಗಳಿಂ ।
ದಂಗಡಿಬೀದಿಯೊಪ್ಪಿದುದು ಭೂವರಪುತ್ರರ ಜೂದಿನೇಟ್ಗೆಯಿಂ ॥ ೫೦ ॥

ವರಸೌಧಾಗ್ರಮನೋಜಕೇಳಿವಿಲಸತ್ಕಾಂತಾಂಗಸೌರಭ್ಯಮಾಂ ।
ತುರುಹಸ್ತಿವ್ರಜದಾನಗಂಧರುಚಿಯುಂಡುತ್ಸಾಹದಿಂ ಮಾಂದುಪು ।
ಷ್ಪರಸಂಗೊಂಡುರೆ ಸೊರ್ಕಿ ಝುಂಕರಿಪ ರೋಲಂಬಾಳಿಯಿಂ ರಾಜಿಕುಂ
ತರಣೀಂದುಸ್ಫುಟವೀಧಿಯಿಂ ಯುವಜನಾಪಾಂಗಪ್ರಭಾಭಾಸುರಂ ॥ ೫೧ ॥

ಇಂತು ಮೆಱೆವ ಪುರಮಧ್ಯದೊಳ್

ಪುರಲಕ್ಷ್ಮೀಕನಕಾಬ್ಜಕರ್ಣಿಕೆಯೆನಲ್ ಸ್ವರ್ಣಾಳಿರತ್ನಾಂಶುಭಾ ।
ಸುರಸೌಧಪ್ರಭೆಯಿಂದೆ ಹೇಮರಚಿತಪ್ರಾಕಾರದಿಂ ಮಾಧುರೀ ॥

ಸುರವಂಗ್ಯೈವ ಕಪೋತಸಂತತಿಯಿನುದ್ವೃತ್ತಸ್ತಂಭಸುಶ್ರೇಣಿಯಿಂ ।
ಧರಣೀಂದ್ರಾಲಯಮೊಪ್ಪಿದತ್ತು ಶತಭೂಸ್ವತ್ತೇಜದಿಂ ಚೆಲ್ವಿನಿಂ ॥ ೫೧ ॥

ನೀಲದ ಲೋವೆ ಪಚ್ಚೆಯ ಸುವೇದಿಕೆ ವಜ್ರದ ಕಂಭಮಿಂದುಕಾಂ ।
ತಾಲಿಯ ಭಿತ್ತಿ ವಿದ್ರುಮದ ಜಂತೆ ಸುವರ್ಣಕವಾಟಮೀಕ್ಷಿಸಲ್ ॥
ಮೇಲಪ ಪುಷ್ಪರಾಗದುರುಗೇಹಳ ಮೌಕ್ತಿಕಸದ್ವಿಟಂಕಮುಂ ।
ಮಾಲಿಕೆ ಮಾಣಿಕಂಗಳ ವಿಳಾಸದ ಹರ್ಮ್ಯಮದೊಪ್ಪುಗುಂ ಪಲಂ ॥ ೫೨ ॥

ಆನಗರಿಯೊಳತಿರಮ್ಯನ ।
ಮೀನಾಂಗಜರೂಪನಾದ ಚಿಕದೇವಧರಾ ॥
ಮಾನಿನಿಯುರಸಂ ಬುಧತತಿ ।
ಗಾನಂದಮನೀಯುತೊಪ್ಪಿದಂ ಮುದದಿಂದಂ ॥ ೫೩ ॥

ಶ್ರೀರಮೆಯೆಂಬ ಕಲ್ಪಲತೆಯೊಪ್ಪುಗುಮುನ್ನತಶೌರ್ಯಶಾಲಿಪ್ಪ ।
ಧ್ವೀರಮಣಾಳಿವರ್ಯ ಚಿಕದೇವಮಹೀಶನ ಗೇಹದಲ್ಲಿ ವಿ ॥
ಸ್ತಾರನಿಜೋಲ್ಲಸತ್ಪ್ರಸದನಾಮಿತಪುಷ್ಪವಿರಾಜಿತಂ ಸಿತಾಂ ।
ಭೋರುಹನೇತ್ರಕಲ್ಪಕೆಯುತಂ ಪುರುಷಾರ್ಥಫಲಾಳಿದಾಯಕಂ ॥ ೫೪ ॥

ಆನರಪಾಲನ ವಂಶಮ ।
ನಾನುಸಿರ್ವೆಂ ಬಲ್ಲ ತೆಱದೆ ಹೃದಯಾಂಬುಜದೊಳ್ ॥
ಜಾನಿಸಿ ಗೋಪಾಲನ ಚರ ।
ಣಾನುಪಮಾಂಭೋಜಮಂ ಬುಧಾಳ್ಯನುಮತಿಯಿಂ ॥ ೫೫ ॥

ಅದೆಂತೆಂದೊಡೆ—

ಶ್ರಿತಜನಪಾರಿಜಾತನುರುರಾಜಕುಲಾದಿಮನಬ್ಜಜಾಂಡಸಂ ।
ತತಿಪರಿರಕ್ಷಣಾತಿಪಟುಶಾಸನಶಕ್ತಿಸಮನ್ವಿತಂ ರಮಾ ।
ಪತಿ ಸುರಮೌಳಿಕೋಟಿಮಣಿದೀಪವಿರಾಜಿತಪಾದಪಂಕಜಂ ।
ಕ್ಷಿತಿಕಮಲಾನನಾಬ್ಜಮಕರಂದಮಧುವ್ರತನಾದನಾದಿಯೊಳ್ ॥ ೫೬ ॥

ವರನಾರಾಯಣನಾಭಿಯಂಬುಜದಿನಾವಿರ್ಭೂತನಾದಂ ಲಸ ।
ತ್ಸರಸೀಜಾಸನನಾತ್ಮಸನ್ನಿಭ ಕುಮಾರಂ ಸತ್ಪ್ರಪಂಚೋದಯಂ ॥
ತರದಿಂದೊಪ್ಪುವ ಲೋಕಚೇಷ್ಟೆಯದು ತಾನಾರಿಂದಮುದ್ಭಾವಿಕುಂ ।
ಸ್ಫುರಿತಾಸ್ಯಾಬ್ಜಚತುಷ್ಟಯಂ ವಿಧಿಯುಮತ್ರ್ಯಾಗರಾದ್ಯಪಾದಾಂಬುಜಂ ॥

ಸಾರಸಪೀಠಗರ್ಭಧರೆಯೊಳ್ ಮುನಿಸಂತತಿಗೇಯಮಾನನು ।
ವೀರರಮಣಾಳಿಯುದ್ಯದವನೀತ್ರಿದಶರ್ಕಳ ಮೂಲಕಂದಮೆಂ ॥
ಬಾರಮಣೀಯಪುಣ್ಯಯಶನುದ್ಭವಿಸಿರ್ದನುದಾರನತ್ರಿ ತಾಂ ।
ಭೂರಿವನಪ್ರಜೇಶತಿಲಕಂ ನಿಜಗೋತ್ರಜಭೂಪಸೇವಿತಂ ॥೫೯॥

ಇಂದು ಸುಧಾಮಯೂಖನುರುಲೋಕವಿಲೋಕನಭಾಗ್ಯಭೂಮನಾ ।
ನಂದಕರಂ ಲಸದ್ಗುಣವಿಶಿಷ್ಟತನತ್ರಿಮುನೀಶ್ವರಾಕ್ಷಿಯೊಳ್ ॥
ನಂದನನಾಗಿ ಪುಟ್ಟಯತಿರಂಜನದಿಂಪಮೆ ರಾಜನಾಗಿ ತಾ ।
ನೊಂದಿ ಸಮಸ್ತವಿಪ್ರತತಿರಾಜತೆಯಂ ದ್ವಿಜರಾಜನೊಪ್ಪಿದಂ ॥೬೦॥

ಆಕುಮುದೇಶ್ವರಂಗೆ ಬುಧನೆಂದೆನಿಪಾತ್ಮಜನಾದನೊಪ್ಪೆ ವಿ ।
ದ್ಯಾಕಲೆಗಾದಿಕಾರಣನದಾಗಿ ವಿಳಾಸದಿನೂಹಿಸಲ್ ಸದಾ ॥
ಲೋಕನಸೂಚ್ಯಸಂಸ್ಥಿತಿಯ ಲಾಲನೆಯಿಂ ಚಿಕದೇವರಾಯನಂ ।
ತಾಕೃತಿವೆತ್ತು ರಾಜಕುಲಭೂಷಣನಾಗಿ ಸಮಂತು ರಾಜಿಕುಂ ॥೬೧॥

ಆತನ ಗರ್ಭದೊಳ್ ವರಪುರೂರವನೆಂಬ ತನೂಜನಾದನಂ ।
ಜಾತನ ಭೋಗಮೋ ತನುತೆಯಂ ಪಡೆದಂತೆ ಸುರಾಂಗನಾಳಿವಿ ॥
ಖ್ಯಾತೆ ವರಾಂಗಿಯೂರ್ವಶಿಯೊಳಾಯುವೆನಿಪ್ಪ ಕುಮಾರನಾದನಂ ।
ತಾತನ ಪುಣ್ಯಮುದ್ಭವಿಸದಂತೆ ಲಸನ್ನಹುಷಾಖ್ಯನೊಪ್ಪಿದಂ ॥೬೨॥

ಮುಖಶತಕಂಗಳಿಂ ಪಡೆದು ನಿರ್ಜರಸಂತತಿಯಾಧಿಪತ್ಯಮಂ ।
ಸುಖಮುಖದಿಂದಮಿರ್ದ ನಹುಷಕ್ಷಿತಿನಾಥನ ಗರ್ಭವಾರ್ಧಿಯೊಳ್ ॥
ನಿಖಿಲಕಲಾನ್ವಿತಂ ಕುವಲಯಾಧಿಪನೂರ್ಜಿತಕಾಂತಿಶೋಭಿ ಸ ।
ರ್ವಖಲಜನಾಂಧಕಾರಹರನಿಂದುವಿನಂತೆ ಯಯಾತಿ ಪುಟ್ಟಿದಂ ॥೬೩॥

ಆನರಪಾಲಮೌಳಿಮಣಿಗಾತ್ಮಜರಾದರವರ್ಗಳೈವರು ।
ರ್ವೀನುತಸಚ್ಚರಿತ್ರರನು ತುರ್ವಸು ದೃಹ್ಯು ಯದೂರ್ವರೇಶಸ ॥
ತ್ಯಾನುವಿಲಾಸಿ ಪೂರುವೆನಿಪಾಕಮನೀಯಯಶಸ್ವಿಗಳ್ ಪ್ರತಿ ।
ಷ್ಠಾನಪುರಾಖ್ಯದಲ್ಲಿ ನೆಲಸಿರ್ದರುದಾರಗುಣಾಳಿಮಂಡಿತರ್ ॥ ॥ ೬೪ ॥

ಪಡೆದವರಲ್ಲಿ ಜ್ಯೇಷ್ಠತನುಜಂ ಬಹುಶೌರ್ಯಯುತಂ ವರಪ್ರತಾ ।
ಪದ ನಿಧಿ ಚಾರುಕೀರ್ತಿವರಚಂದ್ರಿಕೆಯಿಂ ಬೆಳಗುತ್ತೆ ಲೋಕಮಂ ॥
ಯದುವಸುಧಾಧಿಪಂ ಚತುರನುದ್ಧೃತವೈರಿ ಸಮಸ್ತಸಂಪದಂ ।
ಪದುಳಮನಾಂತು ರಂಜಿಸಿದನೊಪ್ಪುಮನ್ಯೈದಿ ಕುಲಾತಿಭೂಷಣಂ ॥ ೬೫ ॥

ಯಾದವವಂಶಜಾತರವನೀಂದ್ರರತೀವಯಶೋಧನರ್ ಸದಾ ।
ಭೂದಿವಿಜಾಳಿಪ್ರೋಷಣರತರ್ ಬಹುಶೌರ್ಯಕಳಾಧುರಂಧರರ್ ॥
ವೇದಪಥಾನುವರ್ತಿಗಳನಂತಪರಾಕ್ರಮರಾಯುವಂತರಂ ।
ತಾದರುದಾರಿಗಳ್ ಮಧುರೆಯೊಳ್ ಪರಿಪಂಥಿನೃಪಾಲಮರ್ದನರ್ ॥ ೬೬ ॥

ಆಯದುವಂಶಕಲ್ಪತರುಬೀಜಮೆ ತಾನೆನೆ ನಂದಕಂದನ ।
ಬ್ಜಾಯತಲೋಚನಂ ಶಕಟಧೇನುಕಕಾಳಿಯಪೂತನಾದಿದು ॥
ರ್ಜೇಯಧರಾತಿಭಾರಖಲರಂ ಮಿಗೆ ಭಂಜಿಸಿ ಸಚ್ಚರಿತ್ರಮಂ ।
ಶ್ರೇಯಮನಾಶ್ರಿತಪ್ರತತಿಗಾಗಿಸಿ ಕೃಷ್ಣನೆನಿಪ್ಪನಾಪಡಿಂ ॥ ೬೭ ॥

ಆವನ ಪಾವನಾಮಲಚರಿತ್ರಮನೊರ್ವನೆ ವರ್ಣಿಸಲ್ಕೆ ಸ ।
ದ್ಭಾವನನಾಗಮಪ್ರತತಿಕೋವಿದನೂರ್ಜಿತಪುಣ್ಯಮೂರ್ತಿ ವೇ ॥
ದಾವಳಿಕಲ್ಪಭೂಜಫಲಮುನ್ನತಸಾರರುಚಿಜ್ಞನಾವನು ।
ರ್ವೀವರಬೋಧನೈಕಮತಿ ಬಲ್ಲನವಂ ಶುಕಯೋಗಿಮೌನಿಪಂ ॥ ೬೮ ॥

ಪರಮದಯಾಳು ಕೇಳಗುಣಲೋಲುಪನಚ್ಯುತನಿಂದಿರಾವರಂ ।
ಪರಿಕಿಸಿ ಕೋಟಪುತ್ರರೊಡಗೂಡಿ ವಿನೋದದೆ ದುಷ್ಟದೈತ್ಯಸಂ ॥
ಹರಣಮನಾಗೆಮಾಡಿ ಸುಜನಾಳಿಗೆ ಹರ್ಷಮನಿತ್ತು ನಿರ್ಜರೋ ।
ತ್ಕರಕತಿತುಷ್ಟಿಯಂ ಸಲಿಸಿ ರಂಜಿಸಿದಂ ಪರಮೇಷ್ಠಿವಂದಿತಂ ॥ ೬೯ ॥

ವಾರಿಜನೇತ್ರನೊರ್ಮೆ ಕುಲವರ್ಧನನಾಗಲೆವೇಳ್ಕುಮೆಂದು ತ |
ದ್ದ್ವಾರಕೆಯೆಂಬ ತನ್ನ ಪುರಮಂ ಜಳರಾಶಿಯೊಳಾಳಿಸಂದು ಸು ||
ಸ್ಮೇರಮುಖಾಂಬುಜಂ ಪಡೆದು ವಾಕ್ಯವ ನಾಡಿದನೊಂದನೈದೆ ದೈ |
ತ್ಯಾರಿಸನಾತನಂ ಕರೆದು ತನ್ನ ವಿರಾಜಿಪ ಯೋಗಮಾಯೆಯಂ || ೨೦ ||

ತೆಂಗಿ ಮದೀಯವಂಶಜನ ದೇವನನಾದಿಯೊಳೊಯ್ದು ಯಾದವೋ |
ತ್ತುಂಗಧರಾಧ್ರದಲ್ಲಿರಿಸಿದಂ ಸನಕಾಖ್ಯಮಹಾಮುನೀಶ್ವರಂ ||
ಕಂಗೊಳಿಪಂತೆ ರುಕ್ಮಿಣಿಯ ಸಂತತಿಯಂ ಪರಿಪಾಲಿಸೀಗಳೆಂ |
ದಿಂಗಿತದಿಂದೆ ನೀನವರ ಕಾಮ್ಯವನಿತ್ತು ಮನೋನುರಾಗದಿಂ || ೨೧ ||

ಜಿತದೈತ್ಯಂ ಪೇಳ್ದ ಮಾತಂ ಸ್ಫುರಿತಕರುಣೆ ಕೇಳ್ದಾಗಲೇ ಪ್ರೀತಿವ
ಟ್ಟು | ಕ್ಷಿತಿಯೊಳ್ ಕರ್ಣಾಟದೇಶಾಧಿಕಮಹಿಷಪುರಕ್ಷ್ಮಾಧ್ರದೊಳ್ ತಾ
ನೆ ಬಂದಿ || ರ್ದು ತದೀಯಕ್ಷ್ಮಾಧಿನಾಥರ್ಕಳನಿಭರಿಪುಪೀಠಸ್ಥರಂ ಮಾಡಿ
ದುರ್ಗಾ | ಸತಿ ತದ್ರಕ್ಷಾರ್ಥಮಿರ್ಪಳ್ ಮಹಿಷದನುಜಹೃಚ್ಛಲ್ಯೆಯಾ
ನಂದದಿಂದಂ || ೨೨ ||

ವರದಂ ನಾರಾಯಣಂ ಯಾದವನೃಪನಿವಹಾರಾಧ್ಯಪಾದಾಂಬುಜಂ
ಭಾಸುರದಿವ್ಯಾಂಗಂ ಲಸದ್ಯಾದವಗಿರಿಯೊಳ್ ತಾನಿರ್ಪನಂತೊಂದಿ ದೇ
ವ್ರೀ || ತ್ಕರಸ್ಫುರತ್ಪದ್ಮಸ್ಥೆ ಕೃಷ್ಣಾನುಜೆ ವಿಲಸಿತಚಾಮುಂಡಿಕಾನಾಮ
ಮಂ ತಾ | ಳ್ದುರುಕಾರುಣ್ಯಾಂಗಿಯಿರ್ಪಳ್ ಮಹಿಷಪುರಮಹಾಗ್ರಾಮ
ದೊಳ್ ಸ್ಥೈರ್ಯದಿಂದಂ || ೨೩ ||

ವನಜಾತಾಕ್ಷಮಣಿಸ್ಫುರನ್ಮಕುಟಮಂ ಕೊಂಡುಯ್ಯಲಾಗಳ್ ವಿರೋ |
ಚನದೈತ್ಯಂ ತರಲಂತದಂ ಖಗವರಂ ಸೀಳ್ದಿಕ್ಕಿ ಯಾದೃಚ್ಛನಂ ||
ಘನಕೋಟೀರವನೈದೆ ಕೊಂಡು ಬರುತುಂ ಗೋಮಂತಶೈಲಾಗ್ರದೊಳ್ |
ಮನವೊಲ್ದೀಕ್ಷಿಸಿ ಕೃಷ್ಣನಂ ಹರಿಯೆ ತಾನೆಂದಿತ್ತನಾಮೌಳಿಯಂ ||

ಅನವರತ್ನರಂಜಿತಕಿರೀಟಮನಾವ್ರಜಭಾಮಿನೀಪ್ರಿಯಂ |
ಜಾನಿಸಿ ನೈಜವಂಶಜನದೇವತೆಯಾಗಿಹ ಯಾದವಾಚಲ ||

ಸ್ಥಾನನಿವಾಸಿಗಿತ್ತನದುಕಾರಣಮೀಗಳತೀವಕಾಂತಿಯಿಂ ।
ಭಾನುವಿನಂತೆ ವೈರಮುಡಿಯೆಂಬ ಶುಭಾಖ್ಯಮನಾಂತು ರಂಜಿಕುಂ॥ ೨೫

ಮೊದಲೊಳ್ ಶ್ರೀದೇವಕೀಗರ್ಭದೊಳಿಹ ಬಲನಂ ತಂದು ತಾಂ ರೋ
ಹಿಣೀಗ । ರ್ಭದೊಳಂತಾಯೋಗಮಾಯಾಸತಿಯಿರಿಸಿದಳಂತಾಯದು
ಕ್ಷ್ಮೇಂದ್ರವಂಶಾ ॥ ಸ್ಪದಪೃಥ್ವೀನಾಥರಂ ದ್ವಾರಕೆಯಿನತಿದಯಾಪಾಂಗೆ
ಚಾಮುಂಡಿ ತಂದು । ನ್ಮುದದಿಂದಂ ಸ್ಥಾಪಿಸಂಗೆಯ್ದಳನಘ ಮಹಿಶೂಗ್ರಾ
ಮದೊಳ್ ವರ್ಧಿಸುತ್ತುಂ ॥ ॥೨೬॥

ಮಿಗೆ ಭಕ್ತ್ಯುನ್ನತಿಯಿಂ ಹೃದಂಬುಜದೊಳಾಚಾಮುಂಡಿಕಾದೇವಿಯಂ।
ನಗುತುಂ ಧ್ಯಾನಿಸಿ ತತ್ಪದಾಂಬುಜಮನಂತಾರಾಧನಂಗೆಯ್ಯುತುಂ ॥
ಮೃಗರಾಜೋರುಪರಾಕ್ರಮರ್ ಶಶಿಕುಲೋತ್ತಂಸರ್ ಜನಾನಂದಕರ್ ।
ಸುಗುಣರ್ ಯಾದವವಂಶಸಾರಸದಿನೇಶರ್ ಶೋಭಿಸಿದರ್ ನೃಪರ್ ॥೨೭॥

ಚಿರಕಾಲಂ ಶಶಿವಂಶಮಿರ್ದುದು ಮುದಂಬೆತ್ತಾ ಪ್ರತಿಷ್ಠಾನದೊಳ್ ।
ಪರಿಪೂರ್ಣೋತ್ಸವಮಾಂತು ಸನ್ಮಧುರೆಗಂ ಬಂದಾಬಳಿಕ್ಕೈದಿಯೊ ॥
ಪ್ಪಿರಲಾದ್ವಾರಕಿಯೆಂಬ ಪತ್ತನಮನುದ್ಯತ್ಸೌಖ್ಯಮಾಂತಿರ್ದು ಬಂ ।
ಧುರಕರ್ಣಾಟಕದೇಶಮಂ ಕ್ರಮದೆ ಸೇರಿತ್ತುನ್ನತಾನಂದದಿಂ ॥೨೮॥

ಕುಮುದಾಪ್ತಾನ್ವಯದಲ್ಲಿ ಗರ್ವಿತರಿಪೂರ್ವೀಶಂದ್ರೋತ್ತಮಾಂಗಸ್ಫುರ
ತ್ಕಮನೀಯಾಮಿತಮೌಳಿರತ್ನರುಚಿಸಂಘಾಪ್ತಾಂಘ್ರಿಪದ್ಮಂ ಲಸ ॥
ತ್ಸುಮನೋಭೂರುಹಮಧ್ಯದೊಳ್ ಮೆಱೆವುದೆಂತಾಪಾರಿಜಾತಂ ಧರಾ ।
ರಮಣಂ ಬೆಟ್ಟದಚಾಮರಾಜನುರುಸೌಂದರ್ಯಾಲಯಂ ಪುಟ್ಟಿದಂ ॥ ೨೯॥

ಆನೃಪಚಕ್ರವರ್ತಿಗೆ ತನೂಭವರಾದನೂನಮಾದ ವೈ ।
ತಾನಧನಂಜಯತ್ರಯಿಮವಿಲಾಸಿತಕಾಂತಿವಿಲಾಸಮೂರ್ತಿಗಳ್ ॥
ಸೂನಶರೋಪಮರ್ ಪಿರಿಯನುತ್ತಮರೊಳ್ ವರತಿಮ್ಮರಾಜನು ।
ವೀರನುತಕೃಷ್ಣರಾಜನುರುಚಾಮನೃಪಂ ಸಲೆ ಮೂವಱುತವರ್ ॥

ಅರಿಭೂಪವ್ರಜಮಂ ವಿದಾರಿಪ ಮಹಾಖಡ್ಗಾಂಬುಧಾರಾಳಿಯೊಳ್ ।
ನಿರುತಂ ವಾರಿವಿನೋದಕೇಳಿಯೆಸಗುತ್ತಿರ್ದಂತೆ ಮಾಳ್ಪಂ ಸ್ಫುರ ॥
ದ್ವರರಾಜ್ಯೇಂದಿರೆಯಂ ಪ್ರತಾಪಮಹಿತಂ ಕೀರ್ತ್ಯೂರ್ಜ್ಜ್ವಲಂ ಸಂಪದು।
ದ್ಧರಿತಂ ರಂಜಿಸಿದಂ ಕರಂ ಧರಣಿಯೊಳ್ ಶ್ರೀತಿಮ್ಮರಾಜಾಧಿಪಂ ॥೮೧॥

ಬಿರುದೆಂತೆಂಬರ ಗಂಡನೆಂದೆನಿಪ ರಾಜಂ ನಾಮಮಂ ತಾಳ್ದ ಭೂ ।
ಸುರಭೂಮೀಶ್ವರ ತಿಮ್ಮರಾಜನುರುಶೌರ್ಯೋನ್ನತ್ಯಮಂ ಕೇಳ್ದು ತಾಂ॥
ಪರಿಪಂಥಿವ್ರಜಮಂತೆ ಕಂಪನಮನಾಂತಿರ್ದಂಜಿದಂತಾಗಳು ।
ಚ್ಚರಿಸಲ್ ಬಣ್ಣಿಸಲಾರ್ಗೆ ಶಕ್ಯಮವನುದ್ಯಚ್ಛೌರ್ಯಧೈರ್ಯಾಂಗಮಂ ॥

ನುತತೇಜಸ್ವಿಸಮೂಹದೊಳ್ ಮೊದಲಿಗಂ ಶ್ರೀತಿಮ್ಮರಾಜಕ್ಷಮಾ ।
ಪತಿಯುಂ ತತ್ಸಹಜಾತ ಚಾಮಜನಪಂ ಯುದ್ಧೋರ್ವಿಯೊಳ್ ಗೆಲ್ದನುಂ
ಡಿತಶೂರಾಗ್ರಣಿ ಚಾಮರಾಜನೃಪಸೇನಾಧೀಶನಂ ವಿಕ್ರಮೋ।
ದ್ಧತನಂ ರೇಮಟವೆಂಕಟೇಂದ್ರನನಿಳಾಚಕ್ರಂ ಪೊಗಳ್ವಂತೆವೋಲ್॥೮೨॥

ಮೊದಲೊಳ್ ನಂದಾತ್ಮಜಾನುಗ್ರಹದಿನಶನಿಬಂದಾಗಳೇ ಶಕ್ತಿ ತಾನಿ ।
ಲ್ಲದೆ ಬಿದರ್ಗಂತಿದುರ್ಗಾಪಾರ್ಥನ ಕರಪುಟದೊಳ್ ಚಾಮರಾಜೇಂದ್ರನಂತಾ
ಗಿದ ವಜ್ರಂ ಕೇಶಮಂ ಕೊಂಡಿರದೆ ಗಮಿಸಿತಾಪಾರ್ಥನೀತಂ ಕಣಾ! ಎಂ।
ದೊದವರ್ಗಂತೀಕ್ಷೋಣೀಗಾದೇವಿಯು ಕರುಣದಿನೇವೇಳ್ವೆನಾಶ್ಚರ್ಯಮಲ್ತೇ॥

ಧರಣೀಶಾಗ್ರಣಿ ಚಾಮಭೂಪತಿಗೆ ನಾಲ್ವರ್ ನಂದನರ್ ಪುಟ್ಟಿದರ್ ।
ಪಿರಿಯಂ ರಾಜನೃಪಂ ಸುಮಾಸ್ತ್ರನಿಭಸೌಂದರ್ಯಸಾರಂ ದಯಾ ॥
ಸ್ಫುರಿತಂ ಬೆಟ್ಟದ ಚಾಮರಾಜಜನಪಂ ಶ್ರೀದೇವರಾಜಂ ಯಶೋ ।
ಭರಿತಂ ಚೆನ್ನವಸುಂಧರಾಪತಿ ಬುಧವ್ರಾತಾಮರೋರ್ವೀರುಹಂ ॥೮೪॥

ಪರಸಂ ರಾಜನೃಪಂ ಪ್ರತಾಪರುಚಿಯಿಂ ಬಾಲಾರ್ಕನಂತೊಪ್ಪಿ ತಾಂ।
ನಿರುತಂ ಕಾರುಗಹಳ್ಳಿಯಾಕ್ಷಿತಿಪನಂ ಸಂಗ್ರಾಮದೊಳ್ ಗೆಲ್ದು ತ॥
ನ್ನುರುಹಸ್ತಾಬ್ಜಕಶಾಗ್ರದಿಂ ಬಡಿದು ನಾಸಾಚ್ಛೇದನಂಗೆಯ್ದು ಭೂ ।
ವರರೊಳ್ ಶೌರ್ಯದೊಳಂ ಪ್ರತಿಷ್ಠೆಯೊಳುಮಾಪಾರ್ಥಂಬೊಲಾರಾಜಿಕಂ

ಕ್ಷಿತಿಪಾಲಾಧಿಕರಾಜಭೂಪತಿ ಬಲೋದ್ದಂಡಂ ರಣಕ್ಷೋಣಿಯೊಳ್ ।
ಖತಿಯಿಂ ಕಾರುಗಹಳ್ಳಿಯಾಮ್ರನುರುನಾಸಾಚ್ಛೇದನಂಗೈದನೆಂ ॥
ತು ತದೀಯಾಪ್ರತಿಮರ್ ಭಟರ್ ಮಿಗೆ ಯಥಾ ರಾಜಾ ತಥೈವ ಪ್ರಜಾ ।
ತತಿಯೆಂವಾಜಿಯೊಳಾಂತು ನಿಂದ ರಿಪುನಾಸಾಚ್ಛೇದಮಂ ಪ್ರಾಣ್ದಪರ್ ॥

ಜನನಾಥಂ ರಾಜಪೃಥ್ವೀಪತಿ ತಿರುಮಲೆರಾಜೇಂದ್ರನಂ ಶೌರ್ಯದೊಳ್ಗೆ ॥
ಲ್ದನವದ್ಯಂ ಯಾದವಾದ್ರೀಶ್ವರಮಹಿಷಪುರಗ್ರಾವಚಾಮುಂಡಿಕಾಮು ॥
ಧ್ಯನವೀನಾವಾಸಮಂ ಕಾಮಿಸಿ ಮಿಗೆ ಮೆಚ್ಚಿವಾರಂಗನಾಥಾಂಗಶಯ್ಯಾ
ಭಿನವಶ್ರೀರಂಗರಾಟ್ಪತ್ತನದೊಳಧಿಕಸಾಮ್ರಾಜ್ಯಮಂ ತಾಳ್ದನಾಗಳ್ ॥

ಇಂತು ಸುಖಸಂಕಥಾವಿನೋದದಿನಿರ್ಪ ಸಮಯದೊಳ್

ಇದು ತಾನಚ್ಚರಿಯಲ್ತೆ ವೇಂಕಟಗಿರೀಶಂ ಭಕ್ತನೊರ್ವಂಧಕಂ ।
ಗೆ ದಯಾಸಾಗರನೇಕದೃಷ್ಟಿಯೊಸೆದಿತ್ತಿನ್ನೊಂದು ಕಣ್ಣಂ ಕಲಾ ॥
ಸದನಂ ರಾಜನರೇಂದ್ರನಿಂ ಪಡೆಯಲೈದೆಂದಾಡಿದಾಮಾತಿನ ।
ಭ್ಯುದಯಂಗೊಂಡವನಲ್ಲಿಗಲ್ಲಿಗಟಿಸುತ್ತುಂ ರಾಜಭೂಮೀಶನಂ ॥ ೮೯ ॥

ಬಂದುಱಿ ರಾಜಭೂಪತಿಗೆ ವೇಂಕಟನಾಥನುಸಿರ್ದ ವಾಕ್ಯಮಂ ।
ಸಂದಿಸೆ ನಕ್ಕು ಲೇಸೆನುತುಮಕ್ಷಿಯನಿತ್ತೆನಭೀಕ್ಷಿಸೆನ್ನ ನೀ ॥
ನೆಂದೆನಲಾಕ್ಷಣಂ ಪರಿಜನಾಳಿಗೆ ವಿಸ್ಮಯಮಾಗಲಂಬಕಂ ।
ಬಂದುದವಂಗೆ ರಾಜನೃಪನಂ ಪೊಗಳುತ್ತವನಾಗಳೈದಿದಂ ॥ ೯೦ ॥

ಕರುಣಾಂಭೋನಿಧಿರಾಜಭೂಮಿಪತಿ ವೈಕುಂಠಕ್ಕೆ ಪೋಪಾಗಳ ।
ಚ್ಚರಿಯೊಂದಾದುದು ಯಾದವಾಚಲದ ಶ್ರೀನಾರಾಯಣಾಗಾರದೊಳ್ ॥
ದೊರೆ ತಾಂ ಬಂದನೆನುತ್ತೆ ವಾದ್ಯರವದಿಂ ದೀಪಾಳಿಧೂಪಂಗಳಿಂ ।
ದಿರದಾರಾಧಿಸಿ ದೇವನಂ ನೃಪತಿಯಂ ಕಂಡಾಗಳೆಲ್ಲಾ ಜನಂ ॥ ೯೧ ॥

ಭರದಿಂದೆರ್ದರೆ ದೇವಗೇಹದೊಳ ಪೊಕ್ಕಂ ಪೊಕ್ಕುದಂತಲ್ಲದೆ ।
ಲ್ಲರ ನೇತ್ರಾವಳಿಗೈದೆ ಕಾಣಿಸದಿರಲ್ಕಾಶ್ಚರ್ಯಮಾಂತಿರ್ದರು ॥

ಚ್ಚರಿಸಲ್ ಪೂರ್ವದ ಷೋಡಶಾವನಿಪರೊಳ್ ರಾಜಕ್ಷಮೇಶಂಗದಾರ್ ।
ಸರಿಯಂ ಕಾಣೆನದೆಂಬಿನಂ ಗಮಿಸಿದಂ ನಾರಾಯಣಸ್ಥಾನಮಂ ॥೯೨॥

ಮೆಱೆವಿದ್ಯದ್ವೀಪದಿಂ ಮುಟ್ಟಿಸಿದ ಮಿಱುಪ ಪಂಜೆಂತುಟಾರಾಜಭೂ
ಮೀ । ಶ್ವರಚೂಡಾರತ್ನರವ್ಯಾನುಜವೆನಿಸುವ ಶ್ರೀದೇವರಾಜಂಗೆ ಪು
ತ್ರಗ ॥ ವರಸೀತಾರಾಮನೊಳ್ ಲಕ್ಷ್ಮಣನ ನಡತೆವೊಲ್ ದೊಡ್ಡದೇ
ವೇಂದ್ರನೊಳ್ ಭೂ । ಧರಧೈರ್ಯಂ ಚಿಕ್ಕದೇವಕ್ಷಿತಿಪತಿಯೆಸೆವಂ ಜ್ಯೇ
ಷ್ಠಸದ್ಭಕ್ತಿಯಿಂದಂ ॥ ॥೯೩॥

ಬಱಿಕಾದೇವನೃಪಾಲನಲ್ಲಿ ಮಱಿದೇವೇಂದ್ರಂ ಮಹಾಭಕ್ತಿಯಂ ।
ತಳೆದಿರ್ಪಂ ಭರತಕ್ಷಮಾಪತಿಯೊಳಾಶತ್ರುಘ್ನನೆಂತಂತೆ ಭೂ ॥
ತಳದೊಳ್ ನಾಲ್ವರಿವರ್ ಲಸದ್ಗುಣಯುತರ್ ಸತ್ಕೀರ್ತಿಶೀಲರ್ ಯಶೋ ।
ಮಿಳಿತರ್ ಸನ್ನಯಶಾಲಿಗಳ್ ಜನಿಸಿದರ್ ಲಾವಣ್ಯಸಾರೋನ್ನತರ್ ॥೯೪॥

ಸಾರಗುಣಂಗಳಿಂ ವಿನಯದಿಂ ವರನೀತಿಯನಾಂತ ಶೌರ್ಯದಿಂ ।
ಚಾರುಗಭೀರದಿಂ ನತಜನಾಳಿಗೆ ಮಾಳ್ಪ ಮನೋನುರಾಗದಿಂ ॥
ಪೂರಿತಕೀರ್ತಿಯಿಂ ಲಲಿತಸಂಪದದಿಂ ರಘುನಾಥನಂತೆ ಪೃ ।
ಥ್ವೀರಮ ದೊಡ್ಡದೇವಜನನಾಯಕನಂತವರೊಳ್ ವಿರಾಜಿಕುಂ ॥೯೫॥

ಜಲಜಾತಾಯತಲೋಚನಂ ಕುಮುದಿನೀಕಾಂತಾನನಂ ಕಂಬುಮಂ ।
ಜುಲಕಂಠಂ ಮೃದುಪಲ್ಲವಾಂಘ್ರಿ ಸುವಿಶಾಳೋರಸ್ಸ್ಥಳಂ ದೀರ್ಘಬಾ॥
ಹುಲತಾಯುಕ್ತನನಂಗನಂ ಜಱಿವ ಲಾವಣ್ಯಾಂಗಸಾರಂ ಜನಾ ।
ವಳಿ ಕಂಡಾಕ್ಷಣಮುತ್ಸವಂದಳೆಯಲೊಪ್ಪಿರ್ದಂ ಧರಾವಲ್ಲಭಂ ॥೯೬॥

ಸುರುಚಿರ ದೊಡ್ಡದೇವನರನಾಥನ ರೂಪಿಗೆ ಸೋಲ್ತು ನಾರಿಯರ್ ।
ಸ್ಮರಶರಬಾಧೆಯಾಂತು ಪರಿದೈತರೆ ನೋಡದೆ ಧೈರ್ಯದಿಂದೆ ನಿ ॥
ರ್ಜರಸತಿಪುತ್ರನೂರ್ವಶಿಗೆ ಸೋಲದೆಯಿರ್ದನದೆಂತುಟಂತುಟಾ ।
ನರನೆನಲೊಪ್ಪಿ ಕಾಮಿಸದೆ ಶ್ರೀದೊಡದೇವಜನೇಶನೊಪ್ಪಿದಂ ॥೯೭॥

ಮೃದುಭಾಷಂ ಸತ್ಯಸಂಧಂ ವಿಬುಧರುಚಿರಸಂಗಂ ರಮಾಧೀಶಪೂಜಾ ।
ಮುದಿತಸ್ವಾಂತಂ ದಯಾಂಭೋನಿಧಿಸಕಲಜನಾಹ್ಲಾದಕೃತ್ಯಂ ಪ್ರತಾಪಾ॥
ಸ್ಪದನುದ್ಯದ್ಧೈರ್ಯವಂತಃ ನಿಪುಣತಿಲಕನಂತೇಕಪತ್ನೀವ್ರತಸ್ಥಂ ।
ಮದನಾಕಾರಂ ವಿನೋದಂಬಡೆದೊಸೆದೆಸೆದಂ ದೊಡ್ಡದೇವೇಂದ್ರಭೂಪಂ॥

ಕುಮುದಸಖಂಗೆ ಚಂದ್ರಿಕೆಯದೆಂತು ಸುಧರ್ಮಕೆ ಕೀರ್ತಿಯೆಂತು ಭೂ ॥
ರಮಣನ ದೊಡ್ಡದೇವನರನಾಥನ ಪಟ್ಟದರಾಣಿಯಾಗಿ ಸ ॥
ದ್ವಿಮಲಗುಣಾಭಿರಾಮೆ ವರಶೀಲೆ ಸುರೂಪಿಣಿಯೊಪ್ಪಿದಳ್ ರಮಾ ।
ರಮಣಿಪೋಲಂಗನಾಕುಲಶಿರೋಮಣಿ ತಾನಮೃತಾಂಬೆಯೀಕ್ಷಿಸಲ್ ॥

ಕ್ಷಿತಿಯಲ್ಲಿಪೂರ್ರುಸತ್ಕಲಾಸಮುದಯೋತ್ಸಂಲಾಲನಾರ್ಥಂ ಕುಲೋ।
ನ್ನತಧರ್ಮಾವಳಿಪಾಲನಾರ್ಥಮಮೃತಾಂಬಾದೇವಿ ಪೆತ್ತಳ್ ಕರಂ ॥
ಸುತರತ್ನದ್ವಯಮಂ ಮಹಾನಿಧಿಗಳೊಳ್ ಶಂಖಾಖ್ಯಪದ್ಮಂಗಳಂ ।
ತತಿಶೂರಾಗ್ರಣಿ ದೊಡ್ಡದೇವಜನರಾಟ್ಪುಣ್ಯಂ ಕವಲ್ತಂತೆಪೋಲ್ ॥

ಕ್ಷೀರಾಂಭೋನಿಧಿಯಲ್ಲಿ ಕೌಸ್ತುಭಲಸಚ್ಚೂಡಾಮಣಿದ್ವಂದ್ವಮಂ ।
ತಾರಯ್ಯಾಲ್ ಗಗನಾಗ್ರದೊಳ್ ರವಿಸುಧಾಧಾಮರ್ ಸುಶೀಲರ್ ಸ್ಮರಾ ॥
ಕಾರರ್ ಶ್ರೀಚಿಕದೇವರಾಜವಿಲಸತ್ಕಂಠೀರವೇಂದ್ರರ ಧರಾ ।
ನಾರೀಶಾಧಿಕದೊಡ್ಡದೇವನೃಪವರ್ಯಂಗಾದರಿರ್ವರ್ ಸುತರ್ ॥೧೦೧॥

ರಾಮನ ಪಾದುಕಾದ್ವಯಮನರ್ಚಿಸಿಯಂತೆದನಿಟ್ಟುಕೊಂಡು ಭೂ ।
ರಾಮೆಯನಾಳ್ದನೆಂತು ಭರತಂ ಪದಿನಾಲ್ಕು ಮಹಾಬ್ದಮಂತೆ ಸು ॥
ಕ್ಷೇಮದೆ ದೊಡ್ಡದೇವನೃಪನಂಘ್ರಿಯ ಭಕ್ತಿಯೊಳಾಳ್ದನಿಂದ್ರಭೋ ।
ಗಾಮಿತಭಾಗ್ಯದೇವನೃಪಮೌಳಿ ಚತುರ್ದಶವರ್ಷಮುರ್ವಿಯಂ ॥೧೦೨॥

ಆದೇವಕ್ಷಿತಿಪಾಲನಿಂದೊಗೆದುವಾಯುಜಾಕ್ಷ್ಮಾಳಿಗಳ್ ಸಂತತಂ ।
ಭೂದೇವಾವಳಿಗಗ್ರಹಾರಬಹಳಸ್ವಾಸ್ಥ್ಯಂಗಳಂತಾಬುಧಾ ॥
ಹ್ಲಾದಂಗಳ್ ಮಿಗಲಲ್ಲಿಗಲ್ಲಿಗೆ ಮಹಾಸತ್ರಾಳಿಯುಮಂ ಪೂಣ್ಮೃತೆ ।
ಲ್ಲಾದಾನಂ ಶ್ರುತಿವೃಂದಮಂತೆಸೆದುದಾದರ ಲಬ್ಧಕಾಮರ್ ನರರ್ ॥೧೦೩॥

ವಿಲಸತ್ಬ್ರಹ್ಮಾಂಡಸಪ್ತಾಂಬುಧಿಕನಕರಥೇಭಾಶ್ವಸತ್ಕಲ್ಪವಲ್ಲೀ ।
ಲಲಿತಪ್ರೋದ್ಯೋತಚಕ್ರಾಮರತರುಮಣಿಗೋಸ್ವರ್ಣಭೂಸ್ವರ್ಣಗರ್ಭಾ
ಕಲಿತಶ್ರೀಕಾಮಧುಕ್ಪಂಚಹಲವರತುಲಾಪೂರುಷಂ ಗೋಸಹಸ್ರಾ ।
ಖಿಲಭೂತವ್ಯೂಹರಾಜದ್ಘಟಮಿಳಿತಮಹಾದಾನವಂ ದೇವರಾಜಂ॥೧೦೪॥

ಫಲವೃಂದಂ ತಿಲರಾಶಿ ವಸ್ತ್ರಮಹಿಷೀದಾನಂ ಘೃತಂ ಧಾನ್ಯಸಂ ।
ಕುಲದಾನಂ ಮಿಗೆ ಕಾಲಪೂರುಷಮುಖಪ್ರೋದ್ದಾನಯೂಥಂಗಳಂ ॥
ನಲಿದಿತ್ತುರ್ವಿಯ ನಿರ್ಜರರ್ಗೆ ರಘುನಾಥಂಗೀನ್ನೃಪಂ ಸಾಟಿಯೇ ।
ದುಲಿಯಲ್ ಸರ್ವಜನಂಗಳಂತೆಸೆದನಾದೇವಕ್ಷಮಾವಲ್ಲಭಂ ॥೧೦೫॥

ಶ್ರೀರಂಗೇಶ್ವರಪಾದಪಂಕರುಹಭಕ್ತ್ಯುತ್ಸಾಹದಿಂ ವೈರಿರಾ ।
ಡ್ವಾರೋತ್ಖಂಡನದಿಂ ಸದಾವಿತರಣವ್ಯಾಪಾರದಿಂ ಸತ್ಯವಾ ॥
ಕ್ಸಾರಾಳಿಪಟಿನುಲ್ಲಸತ್ಕರುಣದಿಂದಾದೇವರಾಜಂಗದಾ ।
ರಾರಯ್ಯಲ್ ಸಮರಾದ ಭೂಪತಿಗಳನ್ನಿಲ್ಲೆಂಬಿನಂ ರಾಜಿಕುಂ ॥೧೦೬॥

ಧರಣೀತಳಾಗ್ರಮಂ ವಹಿಸಿ ದುರ್ಜನನಿಗ್ರಹ ಸಜ್ಜನಾಳಿಬಂ ।
ಧುರವರಿರಕ್ಷೆಯಾಂತ ವರದೇವಧರಾಪತಿ ದೇವನಾಥನಂ ॥
ತಿರೆ ಧನಪಾಲವೈಭವಯುತಂ ಚಿಕದೇವಜನೇಶನೆಂಬ ಭಾ ।
ಸುರಸದುಪೇಂದ್ರನೊಲ್ದವನಿಪಾಲನೆಗಾದನುದಾರವಿಕ್ರಮಂ ॥೧೦೭॥

ವಿಲಸತ್ಸಂಗೀತಕಾವ್ಯಂ ಮಧುರಸುಶಾಸ್ತ್ರೋರುಸಾರಜ್ಞಭಾವಂ ।
ಸಲೆ ವಿದ್ವತ್ಸತ್ಕಲಾಪ್ರೌಢಿಯನುಱಿ ತಿಳಿಯಲ್ ಸೂಕ್ಷ್ಮವಾದಂತರಂಗಂ
ನೆಲೆಗೊಂಡೊಂದಿಪ್ಪುದಾರೊಳ್ ಕವಿಜನಹೃದಯಾಭೀಷ್ಟಮಿತ್ತಾಳ್ದ
ನುರ್ವೀ । ತೇಮಂ ಸದ್ಧರ್ಮದಿಂದೋವುವನೆನೆ ಪೊರೆಗುಂ ಚಿಕ್ಕದೇ
ವೇಂದ್ರಭೂಪಂ ॥ ॥೧೦೮॥

ಕಮಲೇಶಕ್ಷೇತ್ರಯೂಥಂಗಳೊಳುರುವಿಬುಧಸ್ತೋಮಮಂ ಪ್ರೋಷಿ
ಸುತ್ತುಂ । ಕಮನೀಯಾಂಭೋಜನಾಭಾಂಘ್ರಿಯ ಶುಭಕರಸಾಹಸ್ರ

ನಾವಮಾರ್ಚನಾಳಿ ॥ ಕ್ರಮದಿಂದಂ ಧರ್ಮಕೋಶಂಗಳನೆಸೆವಿಡಿದಂತುರ್ವಿ
ಸುತ್ತುಂ ಪ್ರತಾಪ್ಪೋ । ತ್ಸವಮುದಾಯಂಗೊಂಡು ಪೃಥ್ವೀತಳದೊಳಧಿಕ
ನೀಂಚಿಕ್ಕದೇವೇಂದ್ರನಿಕರ್ಗಂ ॥ ॥೧೦೯॥

ಮಿಗೆ ನಕ್ರಂ ಪಿಡಿಯಲ್ ಬಹುಗ್ರಮದೆ ಮಾಂ ತ್ರಾಯಸ್ವ ಲಕ್ಷ್ಮೀ
ಶ ಎಂ । ದುಗಿದಂ ಕೂಗಿದ ವಾರಣೇಂದ್ರಪರಿರಕ್ಷಾರ್ಥಂ ಮಹಾವೇಗ
ದಿಂ ॥ ಖಗವಾಹಂ ತವೆ ಬಂದು ಶಾಂತನಹನಾಕಲ್ಯಾಣಿಯಾತೀರದೊಳ್ ।
ಸೊಗಸಿಂದೀವ ಸುನಾಳಕೇರಲಸವಿಷ್ಣ್ವನ್ನಾದಿಯಿಂ ಭೂಮಿಪಂ ॥

ಚಾರುಸುವೃತ್ತದಿಂ ವಿಶದಕಾಂತಿಯಿನುಜ್ಜ್ವಲಸದ್ಗುಣಾಂಕದಿಂ ।
ಭೂರಿಪರೀಕ್ಷೆಯಿಂ ವಿಗತದೋಷದಿನುನ್ನತವಂಶರಮ್ಯರ ॥
ತ್ನೋರುಬುಧಾಳಿಯಿಂ ಸಲೆ ಪ್ರಸಿದ್ಧಿಯನಾಂತಿಹ ರತ್ನಯೂಥದಿಂ ।
ದಾರಯೆ ರಾಜಿಸಿತ್ತು ಚಿಕದೇವಜನಾಧಿಪನಗ್ರಹಾರಮುಂ ॥

ಜಲಜಾತಾಂಬಕ ರಂಗನಾಥನನಿಶಂ ಶ್ರೀಕಾಮಿನೀಯುಕ್ತನಾ ।
ಗಿ ಲಸದ್ಭವರ ಚಿಕ್ಕದೇವಹೃದಯಾಂಭೋರಾಶಿಯಲ್ಲಿರ್ದಪಂ ॥
ಸಲೆ ತತ್ಪ್ರೇರಣೆಯೆಂಬ ಸೇತುವಡೆದೀಭೂಪಾಬ್ಧಿ ಸಂತೋಷ ನಿ ।
ಶ್ಚಲಕಂಠೀರವರಾಜನೆಂಬಣುಗನಂ ತಾಂ ಪೆತ್ತುದುದ್ವೃದ್ಧಬಲಂ ॥೧೧೨॥

ಅನಪಾಯಾಧಿಕಸಿದ್ಧಲಕ್ಷ್ಮಿವಿಲಸದ್ಗಂಧರ್ವವಿದ್ಯಾರಸಂ ।
ಮನವೊಲ್ದಾವನೊಳಪ್ಪುರ್ದಾವಿಬುಧಸುಪ್ರೇಮುಂ ಕುಮಾರೇಂದ್ರರಂ ॥
ಜನಸೇನಾಧಿಪತಿತ್ವಮುಂತೆ ಚಿಕದೇವೇಂದ್ರಾಖ್ಯನಿಂದ್ರಂಬೊಲಂ ।
ತನಘೋಪೇಂದ್ರಸಮಾನುಜತ್ವಮೆಸೆಸಲ್ ಕಂಠೀರವಕ್ಷ್ಮೇಶನಂ ॥೧೧೩॥

ಪರಿಪಂಥಿಕ್ಷಿತಿಗಾಢ್ಯಶೋರುಚಿಸುಕರ್ಪೂರರಾಳಿಯುಂ ತಂದು ಭೂ ।
ಧರವರ್ಯಂ ಚಿಕದೇವಭೂಪತಿಗೆ ತತ್ಕೀರ್ತ್ಯುಜ್ಜ್ವಲತ್ಕಾಂತೆ ತಾಂ ॥
ಸ್ಫುರಿಸಲ್ ಪ್ರೋತ್ತಿಸಿ ತತ್ಪ್ರತಾಪಶಿಖಿಯೊಳ್ ನೀರಾಜನವ್ಯೂಹಮಂ ।
ನಿರುತಂಗೈದುಜಿ ಮಂಗಳಾರತಿಯನೆತ್ತುತ್ತಿರ್ದಪಳ್ ಮೋದದಿಂ ॥೧೧೪॥

ಮುದದಿಂದಿತ್ತಪನಾದರಂ ಮಿಗೆ ಧರಾಮರ್ತ್ಯರ್ಗೆ ಸತ್ಸೌಂದರಾ ।
ಸ್ಪದಕನ್ಯಾತತಿಯುಂ ತದುದ್ವಿತರಣವ್ಯಾಪಾರಹಸ್ತಂ ಸಮಂ ॥
ತೊದವಿಂ ಕ್ಷತ್ರಿಯವೃತ್ತಿಶತ್ರುಜನಕಂ ದೇವಾಂಗನಾನೀಕಮಂ ।
ಪದುಳಂಪಾಳ್ವರದೀವುದಾತನ ಮಹಾಖಡ್ಗಾಂಬುಧಾರಾನ್ವಿತಂ ॥ ೧೧೫ ॥

ವರಕೌಕ್ಷೇಯಕಖಂಡಿತಾರಿನೃಪರುದ್ಯತ್ಕೀರ್ತಿ ತಾಂ ಭೂಮಿಯೊಳ್ ।
ನೆರೆ ಸಂಚಾರಕೆ ತಾಣವಿಲ್ಲದೆ ತೊಳಲ್ದೃತ್ತಂದು ರೂಪಾಂತರಾ ॥
ವರಣಂಗೈದುಱು ಚಿಕ್ಕದೇವಜನರಾಟ್ಪಾರ್ಶ್ವಂಗಳೊಳ್ ಚಾರುಚಾ ।
ಮರದಾಕಾರಮನಾಂತಿನಿತ್ತನಗೆ ಸುಕೇಂದುರ್ವಿತಾನುರ್ಪುಗಂ ॥ ೧೧೬ ॥

ಸಕಲಜ್ಞಾದೃತಸರ್ವಮಂಗಳಶಿರೋರತ್ನಂ ಶುಭಾಂಗಂ ಲಸ ।
ತ್ಪ್ರಕಟಶ್ರೀಕುಲಕಂದಪಾದ ಶಶಿಯುಂ ಶ್ರೀಚಿಕ್ಕದೇವೇಂದ್ರಮ ॥
ಸ್ತಕಮಾಘ್ರಾಣಿಸುವಂತೆ ರಂಗವಿಭು ಸೇವಾಧಿಕ್ಯದಿಂ ನೋಡುತಿ ।
ರ್ದು ಕರಂ ತಾಳ್ದು ನಿರಂತರಂ ಚರಿಯಿಪಂ ಶುಭ್ರಾತಪತ್ರಾಂಗಮಂ ॥

ವ॥ ಇಂತತಿಶಯಪ್ರತಾಪಕೀರ್ತಿಗುಣವಿತರಣಶೌರ್ಯಗಾಂಭೀರ್ಯಧೈರ್ಯ
ಸ್ಥೈರ್ಯವಿನಯೋಕ್ತಿಗಳಂ ಯದುವಂಶಚೂಡಾರತ್ನಮಾಗಿರ್ದ ಚಿಕದೇ
ವಮಹಾರಾಜನಾಕರ್ಣಿಸಿ ಸಂಗೀತಸಾಹಿತ್ಯರಸಪ್ರಮೋದಿತಹೃದಯನು
ಮಾರೋಗಣೆಯುಂ ಗೈದು ಶಯ್ಯಾಲಯದ ದರದಳಿತಪರಿಮಳಮಿಳಿತಕುಸು
ಮವಿಸರಶಯನಾಂಚಿತಮಣಿಪರ್ಯಂಕಪೀಠಹಂಸತೂಲಿಕಾತಲ್ಪಸ್ಥಳದೊಳ್
ಸುಖನಿದ್ರಾಸಕ್ತನಾಗಿರ್ದನಾಪ್ರಸ್ತಾವದೊಳ್

ಜಲಪಕ್ಷಿಗಳುಲಿಯಿಂದಂ ।
ಕಲಹಂಸಂ ಕಮಲತಲ್ಪದಿಂದೇಳ್ವಂತೀ ॥
ಯಿಳೆಯರಸಂ ಗಾಯಕಮಂ ।
ಗಳಗಾನಮನಾಲಿಸುತ್ತೆ ಶಯನಸ್ಥಳದಿಂ ॥ ॥೧೧೮॥

ವನಿತಾಪ್ರೋತ್ತೀಡಯುದಲ್ಲಿ ರಂಗವಿಭುಪಾದಾಂಭೋಜಮಂ ಸ್ವಾಂತದೊಳ್ ।
ನೆನೆದೆರ್ದಾಗಳೆ ನೋಡಿ ದರ್ಪಣದೊಳಾತ್ಮೀಯಾಸ್ಯಮಂ ದಂತಧಾ ॥

ವನಮಂ ಮಾಡಿ ಸುಗಂಧಸೋಷ್ಣಜಲದಿಂದಂ ವಕ್ತ್ರಪಂಕೇಜಮ ॥
ಜ್ಜನಮುಂಗೈದಿಭವೈರಿಪೀಠದೊಳ್ ಕುಳ್ಳಿರ್ದಂ ಧರಾವಲ್ಲಭಂ ॥೧೧೯॥

ಮಿಱುಪ ಹಿರಣ್ಯಚಾರುಗುಣರಂಜಿತಚೇಲಮನಾಂತು ಶೀರ್ಷದೊಳ್ ।
ಧರಿಸಿ ಕಿರೀಟಮಂ ತಳೆದು ಮೌಕ್ತಿಕಶೋಭಿತಕರ್ಣಭೂಷಮಂ ॥
ಸುರುಚಿರಮಾಗಲಿಟ್ಟು ಹುರುಮಂಜಿಯ ಮುತ್ತಿನ ಕಂಠಮಾಲೆಯಂ ।
ಸ್ಫುರಿಸುವ ರನ್ನಮಾಂತ ಪದಕಂದಳೆದೊಪ್ಪಿದನುನ್ನತೋತ್ಸವಂ ॥೧೨೦॥

ಮಣಿರಾಜತ್ಕಂಕಣಂಗಳ್ ಮಿಸುಗೆ ಧರಿಸಿ ಮಂಜೀರಸತ್ಕ್ಷುದ್ರಘಂ
ಟಾ । ರಣಿತಂ ತಾಂ ಪೊಣ್ಮಿರಲ್ ಸೂಡಿಯೆ ಕನಕಕಟೀಸೂತ್ರಮಿಂಬಾಗಿ
ರಲ್ ಬಿ ॥ ನ್ನಣದಿಂದಂ ಕಂಚುಕಂದಾಳ್ದಿಳೆಗೆ ನವಸುಮಾಸ್ತ್ರಂಬೊ
ಲೊಪ್ಪಿರ್ದನೀಧಾ । ರಿಣಿಯಾಣ್ಮಂ ಚಿಕ್ಕದೇವಪ್ರಭು ಕವಿಜನಸಂತಾನ
ಮಂದಾರಭೂಜಂ ॥ ॥೧೨೧॥

ನಾಮಸುತೀರ್ಥಮಂ ರಚಿಸಿ ವಿಪ್ರಸಮರ್ಚಿತದೇವಗೇಹಮಂ ।
ಪ್ರೇಮದಿನೈದಿ ಕೇಶವಪದಾಂಬುಜರಾಜಿತತೀರ್ಥಮೀಂಟು ಸು ॥
ಕ್ಷೇಮದೆ ನಿತ್ಯಹೋಮವಿಧಿಯಂ ನೆರೆ ಮಾಡಿ ವಸುಂಧರಾಮರ ।
ಸ್ತೋಮಕೆ ದಾನವಿತ್ತು ಚಿಕದೇವಮಹೀಶವರಂ ವಿರಾಜಿಕುಂ ॥೧೨೨

ಇಂತು ಕೃತಯಥೋಚಿತನಿತ್ಯಕೃತ್ಯನುಂ, ಮಕುಟಕುಂಡಲಹಾರಕೇಯೂ
ರಕಟಕಕಂಕಣಾಂಗುಳೀಯಕಕಟಸೂತ್ರನೂಪುರಾದ್ಯಾಭರಣಮಣಿಗಣಕಿ
ರಣರಂಜಿತಕಳೇಬರನುಂ, ಹರಿಚರಣಸರೋಜಾರ್ಪಿತಪ್ರಸಾದಸುಧಾರಸಾ
ಸ್ವಾದನನಿರತಹೃದಯನುಂ, ರಸಕರ್ಪೂರತಾಂಬೂಲಸಾರರುಚಿಸುರಭಿತ
ಮುಖಾಂತರ್ವಳಯನುಂ, ಮಣಿಗಣಖಚಿತಕನಕಾಂದೋಳಿಕಾರೂಢನು
ಮಾವೃತಚ್ಛತ್ರಚಾಮರವ್ಯಜನಸೀಗುರಿಪತಾಕಾಸಮೂಹನುಂ, ಕರುಣಾ
ಕಟಾಕ್ಷಾವಲೋಕನಮಾತ್ರಪರಿಪೃತದೀನದೈನ್ಯವಚನನುಂ, ಆಕರ್ಣ್ಯ
ಮಾನಸ್ವಕೀಯಬಿರುದೋಚ್ಚಾರಣವಂದಿಜನಪರಿಪಾಲನುಂ, ಪರಿವೃತಮ
ಕುಟವರ್ಧನಕಿರೀಟಮಣಿಗಣಘೃಣಿಬಾಲಾತಪಮಂಡಿತತರುಣಾದಿತ್ಯನಾ

ಚಿಕದೇವರಾಯಂ ನವರತ್ನಕನಕರುಚಿಶೋಭಿತಸಭಾಮಂಟಪಕ್ಕೈತಂದು ಅತ್ಯಂತಸಂತೋಷದಿಂ ಸಿಂಹಾಸನಾರೂಢನಾಗಿರ್ದನಾಸಮಯದೊಳ್

ಸಚಿವವ್ರಾತಂ ಕವೀಶಾವಳಿ ವಿಬುಧಸಮೂಹಂ ರಸಜ್ಞಾಳಿ ಗಾನ |
ಪ್ರಚುರವ್ಯೂಹಂ ನಟಪ್ರೋತ್ಕರಮುರುಗಮಕಿಸ್ತೋಮಮುದ್ವಂದಿ
ವೃಂದಂ ॥ ನಿಚಿತಂ ಯೋಧಪ್ರತಾನಂ ಪ್ರಬಲಿತತುರಗಾರೋಹಣಪ್ರೌ
ಢಯೂಥಂ | ರಚಿಸಲ್ ಮಲ್ಲವ್ರಜಂ ಸೊಂಪಿಡಿದು ಸಭೆಗೆ ಸಂತೋಷ
ದಿಂ ಬಂದುದಾಗಳ್ ॥ ॥ ೧೨೩ ॥

ಕುಂಚದ ತಾಳವೃಂತಕದ ವೀಳ್ಯದ ಗಂಧದ ಪುಷ್ಪಮಾಲೆಯಾ |
ಸಂಚಿಯ ಖಡ್ಗದಾರತಿಯ ಗಿಂಡಿಯ ಚಾಮರದಂಗರಾಗದಾ ॥
ಕಂಚುಕದಂಗಮರ್ದನದ ಬಿಜ್ಜಣದೊಳಗಮಾಂತ ಭೃತ್ಯವ |
ರ್ಗಂ ಚಿಕದೇವಭೂಮಿರಮಣಪ್ರಿಯಸತ್ಸಭೆಯೊಳ್ ವಿರಾಜಿಕುಂ ॥

ಪೊರೆದೆಳಮೀಸೆ ನೀಳ್ದ ನಗೆಗಣ್ ತೊಳಗುತ್ತಿಹ ಕರ್ಣಭೂಷಣಂ |
ಮಿಱುಗುವ ದಂತಪಙ್ಕ್ತಿ ಲಲಿತಾನನಮಂಡಲಮೊಪ್ಪೆ ನುಣ್ಗೊರಲ್ ॥
ಕರದೊಳಗಾಂತ ಖಡ್ಗರುಚಿ ರಂಜಿಸೆ ಹಾರಮರೀಚಿಯುಣ್ಮೆ ಭೂ |
ವರತತಿ ಬಂದು ರಂಜಿಸಿದುದಾಚಿಕದೇವಸಭಾಂತರಾಳದೊಳ್ ॥ ೧೨೫ ॥

ತೊಳಗುವ ತೊಂಡೆವಾಯ್ದೆಱೆಯ ಮುದ್ದಿನಮಾತಿನ ಸರ್ಪವೇಣಿಯೊಳ್ |
ತಳೆದ ಸುಗಂಧಮಾಲಿಕೆಯ ನೀಳ್ದಲರ್*ಗಣ್ಗಳ ಚಂದ್ರಬಿಂಬಮಂ ॥
ಪಳಿವ ಶುಭಾಸ್ಯದಿಂದುಟಿಯ ನುಣ್ಬೊಗರಂಗದ ವಾರನಾರಿಯರ್ |
ಬೆಳಗುತಪಾಂಗಕಾಂತಿಗಳನುಪ್ಪರ್ತೆ ಸೊರ್ಕುತೆ ಬಂದರೊಪ್ಪಿರಲ್ ॥ ೧೨೬

ನಸುನೋಟಂ ಪೊಸಮೇಟಮುಂ ಯುವನೃಪಾಲಶ್ರೇಣಿಯೊಳ್ ಮೀಱಿ ಪು |
ಟ್ಟಿಸೆ ಹಸ್ತಾಬ್ಜದೊಳಾಂತು ಚಾಮರಮನಂದಂಬೆತ್ತು ಬಿಮ್ಮುತ್ತೆ ರಾ ॥
ಜಿಸಿದರ್ ನೋಟ್ಪ ಭುಜಂಗರಂ ಮದನಬಾಣಕ್ಕೀಡುಮಾಡುತ್ತೆ ರಾ |
ಜಿಸಮೂಹಪ್ರಣತಾಂಘ್ರಿಪದ್ಮಚಿಕದೇವೇಂದ್ರಾಮಳಾಸ್ಥಾನದೊಳ್ ॥

ಮಣಿಯುತ್ತಿರ್ಪ ನೃಪಾಲಮೌಳಿಮಣಿಸಂದೋಹಾಂಶುವಿಂದಂ ಸ್ಫುರ
ದ್ಗಣಿಕಾನಾರಿಯರಕ್ಷಿಹಾಸರುಚಿಯಿಂದಾಭೂಷಣಚ್ಛಾಯೆಯಿಂ ॥
ದೆಣಿಸಲ್ ವೀರಭಟಾಳಿ ಚಿಮ್ಮುವ ಮಹಾಕೌಕ್ಷೇಯಕದ್ಯೋತಿಯಿಂ ।
ಪ್ರಣುತಾನಂದಕಚಿಕ್ಕದೇವನೃಪನಾಸ್ಥಾನಾಲಯಂ ಶೋಭಿಕುಂ ॥ ೧೨೮

ಪಾಡುವ ಗಾಯಕಪ್ರತತಿಯಿಂ ಬಿರುದಾವಳಿಯಂ ಸಮಂತು ಕೊಂ ।
ಡಾಡುವ ವಂದಿಯಿಂದಭಯಮಂ ಮಿಗೆ ಬೇಳ್ಪ ನೃಪಾಲವೃಂದದಿಂ ॥
ದಾಡುವ ವಾರಕಾಂತೆಯರಿನೋಡುವ ಸತ್ಕರಿಯೂಥದಿಂದೆ ಸೊಂ ।
ಪೇಡಿಱದಿರ್ದುದೊಪ್ಪಿತು ಲಸತ್ಸಭೆ ಶ್ರೀಚಿಕದೇವರಾಯನಾ ॥೧೨೯॥

ಸಲೆ ಸುಮನೋರಥಪ್ರಕರಸಂಯುತಮುನ್ನತರಾಜಹಂಸಮಂ ।
ಡಲರುಚಿರಂಜಿತಂ ಸುಕರಮಂಗಳಸೌಮ್ಯಕವಿಪ್ರಸೇವಿತಂ ॥
ವಿಲಸಿತಚಿಕ್ಕದೇವಧರಣೀಂದ್ರಸಭಾಲಯಮೊಪ್ಪಿದತ್ತು ಮಂ ।
ಜುಲಸರದಂತೆ ಪುಷ್ಕರದವೋಲ್ ಘನಚಕ್ರವಿಲಾಸಮಂಡಿತಂ ॥ ೧೩೦॥

ಆಪ್ರಸ್ತಾವದೊಳ್

ಪೆಱಸಾರ್ ಮಾಗಧ ಕುಳ್ಳಿರಿಲ್ಲಿ ಮಲಯಾಳಕ್ಷ್ಮೇಶ ನೀಂ ಕಾಣ್ಕೆಯಂ ।
ನೆಱೆ ನೀಡಂಗ ಕಳಿಂಗ ನಿಲ್ ತಡೆ ವಿದರ್ಭಾಧೀಶ ಚೋಳಂಗೆ ನೀಂ ॥
ತೆಱಪಂ ಮಾಡು ಕರೂಷ ಹುಂ ಗಳವದಿರ್ ಬಂಗಾಳ ಮತ್ಸ್ಯೇಶ ಸೈ ।
ತಿರೆನುತ್ತುಂ ಮಿಗೆ ವೇತ್ರಧಾರಿಗಳುಸಿರ್ದರ್ ತತ್ಸಭಾಸ್ಥಾನದೊಳ್ ॥

ಇದು ಪಾಂಡ್ಯೇಶ್ವರನಿತ್ತ ಹಾರಮಿದು ಚೋಳಾಧೀಶನೊಲ್ದಿತ್ತ ಹೇ ।
ಮದ ಪಲ್ಲಕ್ಕಿ ಕಳಿಂಗನಿತ್ತ ಮದಮಾತಂಗಾಳಿ ಕಾಶ್ಮೀರನು ॥
ನ್ಮುದದಿಂ ಕೊಟ್ಟ ದುಕೂಲಸಂತತಿ ಕರೂಷಂ ಕೊಟ್ಟ ಖಡ್ಗಾಳಿಯಿಂ ।
ತಿದು ಕಾಂಭೋಜಕನಿತ್ತ ವಾಜಿಯವಧಾನೋರ್ವೀಶಚೂಡಾಮಣೀ ॥

ಇಂತೆಂದು ಕಂಚುಕಿಗಳುಗ್ಗಡಿಸುತ್ತುಮಿರೆ ಆಸಮಯದೊಳ್ ಮಿಂಚಿನ ಲತೆಯಂತೆ ಪೊಳೆದು ನಿಂದಚ್ಚರಿಯರಂ ವಿಡಂಬಿಪ ನರ್ತಕಿಯರ ಶ್ರುತಿ ತಾಳ ಮೃದಂಗ ತಂತ್ರಿಗಳ ನುಣ್ಚರದೊಡನೆ ಸೊಪ್ಪಡಂಗಿ ಕಡಂಗಿ ಬೆಡಂಗು ಮೀಱೆ ನಟಿಸಿದರದೆಂತೆನೆ:—

ಜತಿ ಲಯ ತಾಳ ರೀತಿ ಗಮಕಂ ಯತಿತೋಪ್ರು ಕಳಾಸಧಾತು ಮೇ ।
ಱತಿರಸಭಾವಬಿಂಕಮುಱೆ ಬಿನ್ನಣದಪ್ಪದೆ ನೇತ್ರವಕ್ತ್ರಪಾ(?) ॥
ದತಳಕರಂಗಳೊಳ್ ರುಚಿರಗಾನಸುತಾಳದ ಮಾರ್ಗವೊಪ್ಪುವಂ ।
ತತಿಚತುರತ್ವದಿಂದಭಿನಯಂಗಳನೂಹಿಸುತಾಡಿ ತೋಱಿದರ್ ॥೧೩೩॥

ನಿಡುಜಡೆಯಿಂದಲರ್ ಜಗುಳೆ ಕಣ್ಗಳನುರ್ಗ್ಬಿಗರುರ್ವೆ ವಕ್ತ್ರದಿಂ ।
ಪಿಡಿಯೆ ಬೆಮರ್ ತೆರಂಬೊಳೆಯೆ ನುಣ್ಣದಪ್ಪುಣ್ಕ್ಕರೆ ದಂತಕಾಂತಿ ಮಿ ॥
ಲ್ಲಿಡಿಯ ಸುವರ್ಣಕಿಂಕಿಣಿಯ ಮೆಲ್ಲುಲಿ ರಂಜಿಸೆ ಲಾಸ್ಯಮಾರ್ಗದೊಳ್
ಬಿಡದೆ ಬೆಡಂಗುಮೀಱಿ ಮಿಗೆ ನರ್ತಕಿಯರ್ ಸೊಗಸಿಂದವೊಪ್ಪಿದರ್ ॥

ಇಂತಾಡಿದನರ್ತಕೀಜನಕ್ಕೆ ಸಂಗೀತಸಾಹಿತ್ಯರಸಜ್ಞನಾಶ್ರಿತಕನಕವಸಂತಂ ಪಸದನಂಗೊಟ್ಟು ಮುದಂಬಡೆದಿರ್ಪ ಚಿಕದೇವರಾಯನ ಮುಂದೆ ಮೆಯ್ಯುರ್ವಿ ಕೆಯ್ಯಂ ನೆಗಪಿ ವಂದಿಗಳ್ ಪರಾಕು ಪರಾಕೆಂದು ಬಿರುದಾವಳಿಯನುಚ್ಚರಿಸುತಿರ್ದರದೆಂತೆನೆ:—

ಶ್ರೀಮದನಂತಕಲ್ಯಾಣಗುಣಮಣಿಗಣವಿಭೂಷಣವಿಳಸಿತಕಳೇವರ ಪರಾಕು! ಶ್ರೀರಮಣೀರಮಣರಂಗನಾಥಸುರಚಿರಚರಣಚಾಮೀಕರಸರೋಜಪರಾಗಕಾಶ್ಮೀರಲಲಾಮರಾಜಿತಫಾಲ ಪರಾಕು! ಸಮಧಿಗತಸಂಪೂಜ್ಯಸಾಮ್ರಾಜ್ಯಲಕ್ಷ್ಮೀಲಕ್ಷಣದಕ್ಷಿಣಬಾಹುದಂಡೋತ್ತಂಭಿತಮಂಡಲಾಗ್ರಖಂಡಿತರಿಪುಮುಂಡಲೇಂದ್ರವೇತಂಡಶುಂಭತ್ಕುಂಭತಟಮುಕ್ತವಿಮಲಮುಕ್ತಾಫಲಾವಳೀವರಿಷ್ಕೃತಹಾರಕಂಕಣಕುಂಡಲಾದ್ಯಾಭರಣ ಪರಾಕು! ಸಮದಸಮಸ್ತಪ್ರಶಸ್ತಸಾಮಂತಭೂಕಾಂತಕಾಂತಾಸಂತಾನಸೀಮಂತಸಿಂದೂರರೇಖಾಪಲ್ಲವರಸಹರಣಕುಶಲವಿತತಪ್ರತಾಪಖರಕಿರಣಕರನಿಕರಪರಿಹೃತಸರಸಿಜಭವಾಂಡಭಾಂಡಬಹಿಸ್ತಮಸ್ತೋಮ ಪರಾಕು! ಆತ್ಮೀಯಕಟಾಕ್ಷವೀಕ್ಷಣವಳಕ್ಷರುಚಿಸಾಂದ್ರಚಂದ್ರಿಕಾಮುದಿತವಿದ್ವಜ್ಜನಚಕೋರೋದ್ಧಾರ ಪರಾಕು! ಪರಿಪಂಥಿನೃಪಾಲಜಾಲವಿಶಾಲಕಪಾಲಕೀಲಾಲಪಾನಾಸಕ್ತಿಯುಕ್ತವಿತತವಿಶಿಖವಿಸರಮಿಳಿತೋದ್ದಂಡಕೋದಂಡದಂಡ ಪರಾಕು! ಸ್ವಕೀಯಪದಾಶ್ರಿತಜನವನಜವನವಿಕಸನತರುಣಾರುಣೋಪಮ ಪರಾಕು! ನಿಖಿಲವೈರಿನಿಕರಧರಾಕ್ರಮಣಾಭಿಲಾಷಪ್ರೇಷಿತವಿಶೇಷಪರಾಕ್ರಮ, ವೀರಾವೇಶಪರಾಕ್ರಮಘೋಷರೋಷಸಂಘಟ್ಟ

ತಪದಾತಿಸಮುದಯ, ಹೇಷಾರವವಿಡಂಬಿತಶುಂಭದ್ದುಂಭೋಳಿಸ್ವನತುರಂಗಸಂಘ, ಬೃಂಹಿತನಿವದಕಟತಟಗಳಿತಮದಜಳಧಾರಾಲಂಘಿತಪ್ರಳಯಜಳಧರಪಟಲಕಟುಸ್ತನಿತವರ್ಷ, ಸಾರವಾರಣವಾರ, ಜೃಂಭದ್ಬೃಂಭಾಧ್ವನಿಬಧಿರಿತದಿಕ್ಪಾಲಕರ್ಣಕೋಟರಸೇನಾಧಿಪಪ್ರಮುಖವೀರರಸೋದಾರ, ಸಮಗ್ರವಿಗ್ರಹನಿಪುಣೋದಗ್ರದಂಡನಾಥಯೂಥಸಂಯುಕ್ತಸೈನ್ಯಸಮಾಜಕರಧೃತಕಠೋರಕುಠಾರಸಬಳಖಡ್ಗಸುರಗಿಕುಂತಮುಸಲಮುದ ರಪ್ರಾಸ ಪರಿಘಮುಸುಂಡಿಭಿಂಡಿವಾಳಶೂಲಭಲ್ಯಚಕ್ರಚಾಪಶಿಲೀಮುಖಗದಾಂಕುಶಾದ್ಯಾಯುಧನಿಶಿತಧಾರಾಚೂರ್ಣೀಕೃತಮುರಾಪುರಚೊಕ್ಕಲಿಂಗನಾಯಕಶಾದಮಂಗಲರಾಮಚಂದ್ರನಾಯಕವೇಲಾಪುರವೇಂಕಟಾದ್ರಿನಾಯಕಜಡಕನದುರ್ಗನರಸನಾಯಕಪ್ರಭೃತಿರಿಪುಜನಪಾಲದೃಪ್ಯದ್ವಾಹಿನೀವ್ಯೂಹಪರಾಕು! ಅತಿತ್ವರಿತಪರಾಜಿತಕುಟಿಲವಿರೋಧಿರಣರಂಗಸ್ಥಳಪ್ರಸಭಾಕ್ರಾಂತಕೌಕ್ಷೇಯಕಶರಸಬಳಫಲಕಚಕ್ರಕೋದಂಡಸುರಗಿಮುಖ್ಯಶಸ್ತ್ರಸಂಚಯಹಸ್ತಿಹಯೋಷ್ಟ್ರಶಕಟನಿಕರಕಾಂಡಪಟಚಟುಳಚತುರಂತಯಾನವಿತಾನಧನಮಣಿಗಣಭೂಷಣಸಮಸ್ತವಸ್ತುಸ್ತೋಮ ಭೇರೀಮುರಜಡಿಂಡಿಮಕಹಳಾದ್ಯನೇಕವಾದ್ಯಸಂರಂಭಸಂದರ್ಶನವಿಕಸಿತನಿರ್ಮಲಹೃದಯಾಂಬುಜ ಪರಾಕು! ತತ್ಕ್ಷಣವಶೀಕೃತಾನಂತಗಿರಿಮುಟ್ಟಾಂಜಟ್ಟ ಮಳಲಿ ಪರಮತಿ ಅರ್ಕಲಗೂಡು ಜಡಕನದುರ್ಗಾದ್ಯನೇಕ ಸಂಪತ್ಸಮೃದ್ಧಿತಗ್ರಾಮನಿಕಾಯ ಪರಾಕು! ನಿಜಸ್ಥೈರ್ಯಧೈರ್ಯ ಶೌರ್ಯಾತಿಶಯಪರಾಭೂತಸೇನಾವ್ರಾತಭೀತರಾಮಚಂದ್ರನಾಯಕಮಳವರಾಯವೇಂಕಟಾದ್ರಿನಾಯಕಪ್ರಮುಖಶರಣಾಗತನರಪತಿಸಂರಕ್ಷಣವಿಚಕ್ಷಣಚಿತ್ತ ಪರಾಕು! ಆನೀತದಿಗ್ವಿಜಯವಾರ್ತಾಚರನಿಕರೋಕ್ತವಚನರಚನಾಕರ್ಣನಜನಿತಮೋದಸಮುಪ್ರಯುಚ್ಛ್ರಿತಾಂದೋಳಿಕಾಭರಣವಸ್ತ್ರಗಜಾಶ್ವಕ್ಷೇತ್ರತಾಂಬೂಲಾದಿತ್ಯಾಗಸಪ್ತಾಂಗಸಂತೋಷಸರಸಕವಿರಾಜ ಪರಾಕು! ಅಮಂದಕುಂದಮಂದಾರಹಾರಹೀರಘನಸಾರಪಟೀರನೀಹಾರಶಾರದನೀರದಗಂಡಳಿತ ಪುಂಡರೀಕಡಿಂಡೀರಷಂಡಪಯಃಕಾಂಡಧಿಕುಂಡಲಿಪರಿಶಿ (?) ಮಂಡಲಾಧಿಕಪಾಂಡುರಾಖಂಡಯಶಶ್ರೀಖಂಡವಿಲೇಪನಮಂಡಿತನಿಖಿಲಕಕುಭಾಂಗನೋತ್ತುಂಗಸ್ತನಕನತ್ಕನಕಲಶ ಪರಾ-

ಕು! ಸುಕವಿದಾರಿದ್ರ್ಯವಿದ್ರಾವಣಕನಕಪ್ರವರ್ಷಕರಾಗ್ರಾಧರೀಕೃತ ಸುರಮಹೀರುಹಪ್ರಭಾವ ಪರಾಕು! ಅನವರತವಿನಮದವನೀಧವನಿವಹಮಕುಟತಟಘಟಿತಮಂಜುಳಮಾಣಿಕ್ಯಪುಂಜಸಂಜಾತಕಾಂತಿಪಾಟಲಿತಪದನಖಮಯೂಖ ಪರಾಕು! ನಿಜತನುಲಾವಣ್ಯಜಿತನಲಕೂಬರಜಯಂತಪಸಂತಲತಾಂತಶರರೂಪ ಪರಾಕು! ದೇವಭೂವರಗರ್ಭಪಯಃಪಾರಾವಾರರಾಕಾಸುಧಾಕರ ಪರಾಕು! ಸಂತತತತಘನಸುಕ್ಷೀರಾನದ್ಧದೇಶಿಯಾತಾತ್ಯಹತಪ್ರತ್ಯಾಹತಕಂಪಿತಮೂರ್ಚ್ಛಾಗಮಕಸ್ಥಾಯಿಸಂಚಾರಿಸುಕೀರ್ಣಶುದ್ಧಸಾಳಗಮಂದ್ರಮಧ್ಯತಾರಸ್ವರಮಾಧುರ್ಯತರಸಂಗೀತಶ್ರವಣಲೋಲ ಪರಾಕು! ಅನಿಶಜಾತಿರೂಪರಸಪಾಕಶಯ್ಯಾರೀತಿವರ್ಣನೋಪಮೋತ್ಪ್ರೇಕ್ಷಾಭಾವಚಿತ್ರಾದಿಗುಣಸಮ್ಮಿಶ್ರಸುಧಾರಸಾಯನಾತಿಮಧುರತರಸಾಹಿತ್ಯವಿದ್ಯಾವಿಷಯಾನುರಕ್ತಮಾನಸ ಪರಾಕು! ಅಜಸ್ರದ್ವಿಜಮೂಹಪರಿಪ್ರೋಕ್ಷಣದತ್ತಾತ್ಯಂತಹಿರಣ್ಯರಾಶಿದಾನವಾರಿಧಾರಾಪ್ರವಾಹಪ್ರಹಸಿತಲಸಿತಕನಕಾಚಲಪುರದೀರ್ಘಿಕ ಪರಾಕು! ನಿರಂತರವಿಪ್ರಾಳೀಕೃತಾಮೋಘಾಶೀರ್ವಚನಪರಿವರ್ಧಿತಾಷ್ಟೈಶ್ವರ್ಯಲಕ್ಷ್ಮೀನಿವಾಸ ಪರಾಕು! ನಿಜತನುಸಹಜಪರಿಮಳಸಂಭ್ರಾಂತಬಾಲರೋಲಂಬಜಾಲವಿಸರ್ಜನನಿಪುಣಸುದತೀಜನಕರತಳವಿಲುಳಿತ ವ್ಯಜನಜಾತಮೃದುಪವನನಿಪಾತ ನವೀನವಿತಾನಸುಗಂಧಮಲ್ಲಿಕಾಪ್ರಸೂನ ಪ್ರತಾನಮಕರಂದಬಿಂದುಸಂದೋಹಕರ್ದಮಿತಭೂಭಾಗ ಪರಾಕು! ಜಯರವಮುಖರಮುಖವಂದಿಜನವೃಂದಪರಿಪಠಿತಪ್ರಚುರ ಕವಿನಿಚಯರಚಿತರುಚಿರತರಬಿರುದಗದ್ಯಪದ್ಯಸಮುದಯಸಮುದ್ಘೋಷಸಹಚರಿತಮೃದುಮೃದಂಗಮಂಗಳಸಂಗೀತಶೃಂಗಾರರಸತರಂಗಸಂಗತ ವಾರಾಂಗನಾವಿಲಾಸಲಾಸ್ಯಶಿಂಜಾನಮಂಜುಳಮಂಜೀರಧ್ವನಿಪಟುಪಟಹಶಂಖಭೇರೀತಾಳಜಂಬುಕಮುರಜಢಕ್ಕಾತಂಬಟವೇಣುವೀಣಾಕಾಹಳಾದ್ಯನೇಕಲೋಕಾಕರ್ಣನಕೌತುಕಕರಹೃದ್ಯಾನವದ್ಯವಾದ್ಯನಿನಾದಬಧಿರೀಭೂತಸಕಲದಿಶಾನಿವೇಶ ಪರಾಕು! ಶುಂಭನ್ನಿತಂಬಸ್ಥಲೋಪಲಂಭಿತಕೌಸುಂಭಾಂಬರೋಪರಿಚುಂಬಿತಮೇಖಲಾವಳಯಕಲಿತಕಲಕಿಂಕಿಣೀಗಣಝಣಝಣರಣಿತಸಂಕರಕಂಕಣನಿನದಮನೋಜ್ಞಕರಸರಸಿಜತರುಣೀಜನಚಾಲಿತಚಾ

ಮುರರಂಜಿತಪಾರ್ಶ್ವಯುಗ್ಮ ಪರಾಕು! ಪಾಂಡ್ಯಮಂಡಲಾಧಿಪತುಂಡವಿಖಂಡನತಾರ್ಕ್ಷ್ಯ ಕೇರಳಧರಣೀಶ್ವರನೀರದಪ್ರಚಂಡಪ್ರಭಂಜನ, ಅಂಗಭೂಪಾಂಧಕಾರಪತಂಗ, ವಂಗರಾಜತುರಂಗಶಾರ್ದೂಲ, ತುರುಷ್ಕಸರಸಿಜವನಕುಂಜರ, ಬಾಹ್ಲಿಕಪಾರ್ಥಿವಸ್ವಾಂತಕುಂತ, ಮಲಯಾಳಧರಾಧಿಪಶಿಲೋಚ್ಚಯಕುಲಿಶದಂಡ, ಕಳಿಂಗವಿಭುಲತಾಲವಿತ್ರ, ಕಾಶ್ಮೀರಪ್ರಭುಕಪೋತಶ್ಯೇನ, ಮಾಗಧಪತಿಕರ್ದಮನಿದಾಘಾತಪ, ಸಿಂಧುರಾಜನ್ಯಮದಸಿಂಧುರಹರ್ಯಕ್ಷ, ಪರಾಕು! ಬರ್ಬರನಾಯಕ ಕುವಲಯಪ್ರಚಂಡಮಾರ್ತಂಡ ಪರಾಕು! ವಿದರ್ಭನರನಾಥರಥಾಂಗಸುಧಾಮಯೂಖ, ಆಂಧ್ರಕ್ಷಿತೀಂದ್ರಹೃದಯಶೂಲ, ಕಾಂಭೋಜಕುಂಭಿನೀಧವಾಂಬೋಧಿಕುಂಭಸಂಭವ, ವರಾಟನರೇಶ್ವರಾಟವೀಪಟುವೀತಿಹೋತ್ರ, ಕುರುಧರಣೀವರತರುಕುಠಾರ, ಸೌವೀರವಲ್ಲಭಶರಭಭೇರುಂಡ, ನೇಪಾಳಕ್ಷ್ಮಾಪಾಲಮತ್ಸ್ಯನಿಗ್ರಹಣಬಡಿಶದಂಡ, ಸಿಂಹಳಗಂಹರೀಭರ್ತೃಮಸ್ತಕಾಂಕುಶ, ಮಾಳವಪೃಥ್ವೀಮರ್ಮವಿಭೇದನ, ಶೂರಸೇನಭೂಭೃದ್ವಿಕ್ರಮವಿಭಾಡ ಪರಾಕು! ಮರುಯವನವಿಶ್ವಂಭರೇಶಮುದಿತಮದನಮದಹರರುದ್ರ, ನಿಷಧವಸುಧಾಪರಿವೃಢಗರ್ವನಿರ್ವಾಪಣ, ಸೇವಣಭೂಸ್ವಾಮಿಪ್ರಭಾವನಿಬರ್ಹಣ, ಮಾದ್ರವಸುಂಧರೇಂದ್ರಗೌದ್ರವಿದ್ರಾವಣ, ಅವಂತೀಚೋಳಗುರ್ಜರಲಾಟಚೋಟಕಗೌಳಪಾರಸಿಕಕರೂಷಕೋಸಲಚೇದಿಬಂಗಾಳಪಾಂಚಾಳಗಾಂಧಾರಹಮ್ಮೀರಾದಿಸಕಲದೇಶಾಧೀಶಸಮುದಯಸೈಕತಸೇತುಘ್ನಸಿಂಧುಪ್ರವಾಹ ಪರಾಕು! ನಿತ್ಯಸಿದ್ಧರಾಮಾತ್ಯಸಂದೋಹ ಧರಣೀಶ್ವರಸಮೂಹ ಕವಿನಿವಹ ಗಮಕಿಶ್ರೇಣಿ ವಾದಿಸ್ತೋಮ ವಾಗ್ಮಿಕಸಂತಾನ ವಿಬುಧವಿತಾನ ಗಾಯಕನಿಕಾಯ ನಟಸಮುದಯ ಸಂಧಿವಿಗ್ರಹಿಸಂಚಯ ಭೃತ್ಯಜನವರ್ಗ ಭಟನಿಕುರುಂಬ ರಥಿಕಯೂಥ ಜೋದಕದಂಬ ವಾಹಳಿಕವ್ಯೂಹ ಸಚಿವನಿಚಯ ವಿಪ್ರಪ್ರಕರ ರಸಿಕವಿಸರ ವಂದಿವೃಂದ ವಾರಕಾಂತಾವಾರ ಸಮಂಚಿತಕಾಂಚನಮಣಿಮಯಸಭಾಮಂಟಪರಂಜಿತಸಿಂಹಾಸನಾರೂಢ, ಪ್ರಸನ್ನವದನಾರವಿಂದಮಧುರಮಯಭಾಷಣ, ಸುಧರ್ಮಪ್ರತಿಪಾಲಕಸೌಭಾಗ್ಯಸಂಯುತ, ಯಜನಾಧ್ಯಯನದಾನತ್ರಯನಿರತ, ಪ್ರಭುಮಂತ್ರೋತ್ಸಾಹಶಕ್ತಿತ್ರಯಸಮೇತ, ಸಾಮದಾನಭೇದದಂಡ

ಚತುರೋಪಾಯಕುಶಲ, ಸುಗಂಧವನಿತಾವಸ್ತ್ರಗೀತತಾಂಬೂಲಭೋಜನಶಯ್ಯಾವಿಭೂಷಣಾದ್ಯಷ್ಟಭೋಗಧುರಂಧರ, ದಾಸೀಭೃತ್ಯಸುತಮಂತ್ರಿವಸ್ತುವಾಹನಧನಧಾನ್ಯಸಂಪನ್ನ, ಶೋಭನಾಂಗ, ಪ್ರತಿಜ್ಞಾಪರಶುರಾಮ, ದುಷ್ಟನಿಗ್ರಹ, ಶಿಷ್ಟಪ್ರತಿಪಾಲಕ, ಅದ್ವೈತಪರಾಕ್ರಮ, ವೀರಾಗ್ರೇಸರ ರಾಜಾಧಿರಾಜ, ರಾಜಪರಮೇಶ್ವರ ರಾಜಮಾರ್ತಂಡ, ರಾಜಹಂಸ, ಯಾದವಕುಲಚೂಡಾರತ್ನ, ಆತ್ರೇಯಗೋತ್ರೋದ್ಭವ, ಬಿರುದಂತೆಂಬರಗಂಡ, ಮಹಿಸೂಪುರವರಾಧೀಶ್ವರ, ಯಾಚಕಜನಮಂದಾರ, ಶರಧಿಗಭೀರ, ದೇವಭೂವರಕುಮಾರ, ಸತ್ಯಭಾಷಾಹರಿಶ್ಚಂದ್ರ, ವೈಭವದೇವೇಂದ್ರ, ಚಿಕದೇವರಾಯ, ಮಹಾರಾಜೇಂದ್ರಚಂದ್ರ, ಪರಾಕು! ವಿಜಯೀಭವ! ವಿಜಯೀಭವ!

ವೀರರ ದೇವನಾಗು ರಮಣೀಜನಮನ್ಮಥನಾಗು ಸಂತತೋ |
ದಾರಗುಣಾಢ್ಯನಾಗು ಕರುಣಾರಸಸಾಗರಚಂದ್ರನಾಗು ಸ ||
ತ್ಪೂರಿತಕಾಮನಾಗು ವಿಬುಧಾವಳಿವಾಂಛಿತದಾನಕೃತ್ಯಮಂ |
ದಾರಸಮಾನನಾಗು ಚಿಕದೇವ ಮಹೀಶ್ವರ ರಾಜಶೇಖರಾ || ||೧೩೫||

ಮಂಗಳರೂಪನಾಗು ಸಮರಾಂಗಣಶುಭ್ರತುರಂಗನಾಗು ಸ |
ತ್ಸಂಗತಿಲೋಲನಾಗು ಪರಭೂವರಮೌಳಿನತಾಂಘ್ರಿಪದ್ಮನಾ ||
ಗಿಂಗಿತವೇದಿಯಾಗಖಿಳಶಾತ್ರವಭಂಜನಚಿತ್ರನಾಗು ಕೀ |
ರ್ತ್ಯಂಗನೆಗಾಳ್ದನಾಗು ಚಿಕದೇವಮಹೀಶ್ವರ ರಾಜಶೇಖರಾ ||೧೩೬||

ನಗಧೈರ್ಯಂಗೆ ನರಾಧಿಪಂಗೆ ನತಭೂಪವ್ರಾತಪಾಲಂಗೆ ಪ |
ನ್ನಗಜಿದ್ವಿಕ್ರಮಸಂಯುತಂಗೆ ಜನಚಿತ್ತಾಹ್ಲಾದಕೃತ್ಯಂಗೆ ವಂ ||
ದಿಗಣಾಶಾಫಲದಾಯಕಂಗೆ ಕುಸುಮಾಸ್ತ್ರಾತ್ಯಂತರೂಪಂಗೆ ಶ್ರೀ |
ಚಿಕದೇವಕ್ಷಿತಿಪಾಲಕಂಗೆ ಗುಣವಿಭೂಷಂಗಂ ಜಯಂ ಮಂಗಳಂ ||

ಇಂತೆಂದು ಸ್ತುತಿಸಿದ ವಂದಿಜನಕ್ಕೆ ಪಸಾಯನಮಿತ್ತು ಸಭಾಸ್ಥಾನದಿಂದೆರ್ದು ಬಂದು ಸಕಲರುಮಂ ತಂತಮ್ಮ ನಿವಾಸಂಗಳ್ಗೆ ಕಳುಹಿ ಅರಮನೆಯಂ ಪೊಕ್ಕು ರಂಗನಾಥನ ಕೃಪೆವೆತ್ತು ಪೂರ್ವದ ಷೋಡಶಮಹಾರಾಜರಂ ಮಿಗಿಸಿ ಸುಖದಿಂ ವರ್ಣಾಶ್ರಮಧರ್ಮಂ ತಪ್ಪದಂತೆ ಭೂಮಂಡಲದ ಸಾಮ್ರಾಜ್ಯಮನಾಳುತಿರ್ದಂ.

ಚಿಕ್ಕದೇವೇಂದ್ರವಂಶಾವಳಿ ಸಂಪೂರ್ಣಂ.